TIGHT BINDING BOOK

TEXT FLY WITHIN THE BOOK ONLY

THE BOOK WAS DRENCHED

UNIVERSAL LIBRARY
OU_200787
UNIVERSAL LIBRARY

ಪುಸ್ತಕ ಭಂಡಾರ ಮಾಲೆ—೧೦

# ಹರಿಶ್ಚಂದ್ರ ಸಾಂಗತ್ಯ

ಸಂಪಾದಕ :

ಎನ್. ಬಸವಾರಾಧ್ಯ, ಎಂ.ಎ.

ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

ಕರ್ನಾಟಕ ಸಾಹಿತ್ಯ ಮಂದಿರ,

ಮೊದಲನೆಯ ಮುದ್ರಣ ೧೯೫೪
೨೦೦೦ ಪ್ರತಿಗಳು

ಸಾದಾ ಪ್ರತಿ : ೧೨ ಆಣೆ
ಉತ್ತಮ ಪ್ರತಿ : ೧ ರೂ.

Checked 1965

ಮುದ್ರಕರು :
ಇಂಡಿಯಾ ಪ್ರೆಸ್, ಮೈಸೂರು

# ಮುನ್ನುಡಿ

ಬೊಂಬೆಯ ಲಕ್ಕ ಕವಿ ಹರಿಶ್ಚಂದ್ರನ ಕತೆಯನ್ನು ಬರೆದಿರುತ್ತಾನೆ. ಇದು ಸಾಂಗತ್ಯದ ಧಾಟಿಯಲ್ಲಿದೆ. ಕತೆಯೂ ಮತ್ತು ಅದರ ಧಾಟಿಯೂ ಸಹ ನಮ್ಮ ಜನರಿಗೆ ಪ್ರಿಯವಾದುವು.

ಈ ಸ್ವಾರಸ್ಯವಾದ ಕಾವ್ಯವನ್ನು ನಮ್ಮ ಸಮಿತಿ ಅಚ್ಚು ಹಾಕಿಸಿ ಪ್ರಚಾರ ಮಾಡಲು ಶ್ರೀ ಎನ್. ಬಸವಾರಾಧ್ಯರು ಅವಕಾಶವನ್ನು ಕಲ್ಪಿಸಿದರು. ಅವರಿಗೆ ನಮ್ಮ ಸಮಿತಿಯ ಪರವಾಗಿ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಇದನ್ನು ಮುದ್ದಾಗಿ ಮುದ್ರಿಸಿ ಕೊಟ್ಟ ಇಂಡಿಯಾ ಪ್ರೆಸ್ಸಿನವರಿಗೂ ನನ್ನ ವಂದನೆ.

**ಟಿ. ಮಾದಯ್ಯಗೌಡ**
ಅಧ್ಯಕ್ಷ
ವಯಸ್ಕರ ಶಿಕ್ಷಣ ಸಮಿತಿ

# ವಿಷಯ ಸೂಚಿಕೆ


| | |
|---|---|
| ಪೀಠಿಕೆ | V |
| **ಹರಿಶ್ಚಂದ್ರ ಸಾಂಗತ್ಯ** | |
| ಮೊದಲನೆಯ ಸಂಧಿ | ೧ |
| ಎರಡನೆಯ ಸಂಧಿ | ೨೦ |
| ಮೂರನೆಯ ಸಂಧಿ | ೪೩ |
| ನಾಲ್ಕನೆಯ ಸಂಧಿ | ೭೧ |
| ಐದನೆಯ ಸಂಧಿ | ೮೭ |
| ಅರ್ಥಕೋಶ | ೯೭ |

# ಪೀಠಿಕೆ

ಸಾಹಿತ್ಯ ಪ್ರಪಂಚದಲ್ಲಿ ಹರಿಶ್ಚಂದ್ರ, ಕರ್ಣ, ರುಸ್ತುಂ ಇವರೇ ಮೊದಲಾದವರು ತಮ್ಮ ವಿಶಿಷ್ಟ ಗುಣಗಳಿಂದ ಕೀರ್ತಿಶೇಷರಾಗಿದ್ದಾರೆ. ಇವರೆಲ್ಲರೂ ಬಹಳ ಹಿಂದೆಯೇ ಆಗಿಹೋಗಿದ್ದರೂ ಇವರ ಹೆಸರುಗಳು ಮಾತ್ರ ಇಂದಿಗೂ ಮನೆಮಾತುಗಳಾಗಿವೆ; ಜೀವಂತವಾಗಿವೆ. ಇವು ಅಂಕಿತನಾಮಗಳಾಗಿದ್ದರೂ ರೂಢನಾಮದ ಅರ್ಥವನ್ನು ತಳೆದಿವೆ; ಸರ್ವವ್ಯಾಪಿಯಾಗಿವೆ. ಹರಿಶ್ಚಂದ್ರನ ಕಥೆ ಸಂಸ್ಕೃತ ಕನ್ನಡ ಇವರೆಡು ಭಾಷೆಗಳಲ್ಲಿಯೂ ಸುಪ್ರಸಿದ್ಧವಾಗಿದೆ. ಇದು ಕನ್ನಡದಲ್ಲಿ ಷಟ್ಪದಿ, ಸಾಂಗತ್ಯ, ಯಕ್ಷಗಾನ, ಬಯಲಾಟ ಇವೇ ಮೊದಲಾದ ಛಂದಸ್ಸಿನಲ್ಲಿ ವ್ಯಾಪಿಸಿದೆ.

ಈ ಹರಿಶ್ಚಂದ್ರ ಸಾಂಗತ್ಯವನ್ನು ಬರೆದ ಕವಿ ಬೊಂಬೆಯ ಲಕ್ಕ. ಇವನ ಹೆಸರಿನಿಂದ ಇವನು ಸೂತ್ರದ ಬೊಂಬೆಗಳನ್ನು ಆಡಿಸುತ್ತಿದ್ದಿರಬಹುದೆಂದು ವ್ಯಕ್ತಪಡುತ್ತದೆ. ಮೊದಲನೆಯ ಸಂಧಿ ಆರನೆಯ ಪದ್ಯದಲ್ಲಿ :

ಆದಿಯ ಕಥೆ ವೇದಶಾಸ್ತ್ರವೆಂದು ತಿಳಿವುದು
ಆದಿಯ ಪುಣ್ಯ ಸತ್ಕೃತಿಯ
ಮೇದಿನಿಗೊರೆದ ಬೊಂಬೆಯ ಲಕ್ಕ ಧರ್ಮರ
ಪಾದವೆ ಗತಿಯೆಂದು ನೆನೆದು

ಎಂದು ಹೇಳಿಕೊಂಡಿದ್ದಾನೆ. ಇಷ್ಟನ್ನು ಬಿಟ್ಟು ಕವಿಯ ವಿಚಾರ ಮತ್ತೇನೂ ತಿಳಿದುಬಂದಿಲ್ಲ. ಇವನ ಕಾಲ ಕ್ರಿ. ಶ. ೧೫೩೪ ಎಂದು ಇವನ ಕಾವ್ಯದಿಂದಲೇ ತಿಳಿದುಬರುತ್ತದೆ.

ಈತನು ತನ್ನ ಕಾವ್ಯಕ್ಕೆ ಮೂಲ ಯಾವುದು ಎಂಬುದನ್ನು ತಿಳಿಸಿಲ್ಲ. ಆದರೆ ಈ ಸಾಂಗತ್ಯವನ್ನು ಓದಿದಾಗ ಇದು ರಾಘವಾಂಕನ ಹರಿಶ್ಚಂದ್ರಕಾವ್ಯವನ್ನು ಮೂಲವನ್ನಾಗಿಟ್ಟುಕೊಂಡು ಬರೆದುದೆಂದು ಓದುಗರಿಗೆ ಮನದಟ್ಟಾಗುತ್ತದೆ. ಇವನ ಕಾವ್ಯವನ್ನು ರಾಘವಾಂಕನ ಹರಿಶ್ಚಂದ್ರಕಾವ್ಯದ ಸಾಂಗತ್ಯ

ರೂಪ ಎಂದು ಹೇಳಬಹುದು. ಏಕೆಂದರೆ ಹರಿಶ್ಚಂದ್ರ ಕಾವ್ಯದಲ್ಲಿ ಬರುವ ಪದಗಳನ್ನೇ, ಪಾದಗಳನ್ನೇ, ಪದ್ಯಗಳನ್ನೇ ತನ್ನ ಸಾಂಗತ್ಯಕ್ಕೆ ಅಳವಡಿಸಿಕೊಂಡಿದ್ದಾನೆ. ಷಟ್ಪದಿಯಲ್ಲಿದ್ದ ಹರಿಶ್ಚಂದ್ರ ಕಾವ್ಯವನ್ನು ಸಾಂಗತ್ಯದಲ್ಲಿ ರಚಿಸಿ ಸಾಮಾನ್ಯರಿಗೂ ಅರ್ಥವಾಗುವಂತೆ ಉಪಕಾರ ಮಾಡಿದ್ದಾನೆ. ಇವನ ಭಾಷೆ ಸರಳವೂ ಸುಲಭವೂ ಆಗಿದೆ. ಇದನ್ನು ಹಾಡಿದಾಗ ಇನ್ನೂ ರಸಭರಿತವಾಗಿ ಆನಂದವನ್ನುಂಟುಮಾಡುತ್ತದೆ.

ಒಂದು ಕಾಲಕ್ಕೆ ಹರಿಶ್ಚಂದ್ರನ ಕಥೆ ಯಕ್ಷಗಾನ, ಬಯಲಾಟ ಮತ್ತು ಹಾಡುಗಳ ರೂಪದಲ್ಲಿ ವಿಶೇಷವಾಗಿ ಪ್ರಚಾರದಲ್ಲಿತ್ತು. ಈಗ ಇದು ಕೊಂಚ ಮಟ್ಟಿಗೆ ಕಡಿಮೆಯಾಗಿದೆ. ಮತ್ತೆ ಈ ಉನ್ನತ ಕಥೆ ಪ್ರಚಾರಕ್ಕೆ ಬಂದು ಜನತೆಯ ಮನದ ಮೈಲಿಗೆಯನ್ನು ತೊಳೆಯಲೆಂದು ಹಾರೈಸುತ್ತೇನೆ.

ಈ ಹರಿಶ್ಚಂದ್ರ ಸಾಂಗತ್ಯವನ್ನು ಐದು ಪ್ರತಿಗಳ ಆಧಾರದಿಂದ ಸಿದ್ಧಪಡಿಸಲಾಗಿದೆ. ಇವುಗಳಲ್ಲಿ ಮೂರು ಪ್ರತಿಗಳು ಮೈಸೂರು ಪ್ರಾಚ್ಯವಿದ್ಯಾ ಸಂಶೋಧನ ಸಂಸ್ಥೆಗೆ ಸೇರಿದುವು. ಮತ್ತೊಂದು ಪ್ರತಿ ಮೈಸೂರು ಸರಸ್ವತೀ ಭಂಡಾರಕ್ಕೆ ಸೇರಿದ್ದು. ಇನ್ನೊಂದು ಉತ್ತಮ ಪ್ರತಿ ನನ್ನ ವಿದ್ಯಾಗುರುಗಳಾದ ಶ್ರೀ ಡಿ. ಎಲ್. ನರಸಿಂಹಾಚಾರ್ ಎಂ. ಎ., ಅವರು ಕೊಟ್ಟದ್ದು. ಪ್ರತಿಗಳ ನೆರವು ನೀಡಿದಕ್ಕಾಗಿ ಇವರೆಲ್ಲರಿಗೂ ನನ್ನ ಹೃತ್ಪೂರ್ವಕವಾದ ವಂದನೆಗಳು.

ಬಹಳ ಹಿಂದೆಯೇ ಬೆಳಕಿಗೆ ಬರಬೇಕಾಗಿದ್ದ ಈ ಕಾವ್ಯ ಕಾರಣಾಂತರಗಳಿಂದ ತಡವಾಗಿ, ಇಂದು ಸುದೈವದಿಂದ ಬೆಳಕನ್ನು ಕಾಣುತ್ತಿದೆ. ಈ ಕಾವ್ಯವನ್ನು ಪ್ರಕಟನೆ ಪಡಿಸಿದ ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಅಧಿಕಾರ ವರ್ಗದವರಿಗೆ ನನ್ನ ಕೃತಜ್ಞತೆಗಳು. ಸಮಿತಿಯ ನಿರ್ಧಾರದ ಪ್ರಕಾರ ಈ ಹರಿಶ್ಚಂದ್ರ ಸಾಂಗತ್ಯದ ವರ್ಣನೆಯ ಭಾಗಗಳಲ್ಲಿ ಕೆಲವು ಪದ್ಯಗಳನ್ನು ಕೈಬಿಡಲಾಗಿದೆ. ಈ ಸಾಂಗತ್ಯವನ್ನು ಸುಂದರವಾಗಿ ಮುದ್ರಿಸಿಕೊಟ್ಟ ಇಂಡಿಯಾ ಪ್ರೆಸ್ಸಿನ ಮಾಲೀಕರಿಗೆ ನನ್ನ ವಂದನೆಗಳು.

ಮೈಸೂರು.
೧-೩-೧೯೫೪

**ಎನ್. ಬಸವಾರಾಧ್ಯ.**

# ಹರಿಶ್ಚಂದ್ರ ಸಾಂಗತ್ಯ

# ಹರಿಶ್ಚಂದ್ರ ಸಾಂಗತ್ಯ

ಶ್ರೀಮದ್ಗಂಗಾತುಂಗಮಕುಟಮಣಿ
ಸೋಮಾಗ್ನಿ ದಿನಮಣಿನೇತ್ರ
ಶ್ಯಾಮಕಂಧರನಾಗ ಸುರಚರ್ಮಾಂಬರ
ಪ್ರೇಮದಿಂದೊಲಿದು ರಕ್ಷಿಪುದು ೧

ದೇವರ ದೇವನೆ ದೇವ ಪಂಚಾಕ್ಷರಿ
ದೇವ ತ್ರೈಲೋಕ್ಯವಂದಿತನೆ
ದೇವತೆಗಳ ನಿಮ್ಮ ಕೃಪೆಯಿಂದ ಸಲಹುವ
ದೇವ ವಿರೂಪಾಕ್ಷನೆ ಶರಣು ೨

ಮುರಿಗೊಂಬು ಮೊರಗಿವಿ ಮೆರೆವ ಚೆಲ್ವಧರ
ತುರುಗಿದ ಮಾತಿ ಮುದ್ದುವೊಗದ
ಕರಿಗೊರಳನ ಮೋಹದ ರಾಣಿಯ ಕಂದ
ನೆರೆಜಾಣ ಸಲಹು ಸನ್ಮತಿಯ ೩

ಉತ್ತಮ ಹೀರಾವಳಿ ಚೆನ್ನಪದಕದ
ಕೆತ್ತಿದ ಕಡಗ ಕಂಕಣದ
ಪುಸ್ತಕ ತಾಳ ದಂಡಿಗೆ ಚೆನ್ನಮತಿಯುಳ್ಳ
ಕರ್ತೃ ಭಾರತಿ ಸಲಹೆನ್ನ ೪

ಒಂದುಸುರುವೆ ಕವಿಜನರ ಪಾದಕೆ ನಾನು
ವಂದಿಸಿ ಸಕಲ ಭಕ್ತಿಯಲಿ
ಬಂದಂತೆ ಪೇಳುವೆನೀ ಸತ್ಯಕಾವ್ಯವ
ಚಂದವಲ್ಲದೊಡೆ ತಿದ್ದುವುದು ೫

ಆದಿಯು ಕಥೆ ವೇದ ಶಾಸ್ತ್ರವೆಂದು ತಿಳಿವುದು
ಆದಿಯು ಪುಣ್ಯಸತ್ಕೃತಿಯು
ಮೇದಿನಿಗೊರೆದ ಬೊಂಬೆಯಲಕ್ಕ ಧರ್ಮರ
ಪಾದವೆ ಗತಿಯೆಂದು ನೆನೆದು ೬

ಸತ್ಯದಿ ಗುರುವಿಘ್ನವ ಪರಿಹರಿಸಲು
ಮುಕ್ತಿಯ ಕಡೆಯಲಿ ಕಂಡು
ಉತ್ತಮರವಿಕುಲೋದ್ಭವ ಹರಿಶ್ಚಂದ್ರನ
ಭಕ್ತಿಯ ಕಥೆಯ ಪೇಳುವೆನು ೭

ಒಂದಿನದಿರುಳೋಲಗದಿ ದೇವೇಂದ್ರನು
ಚಂದದ ದೇವಸಭೆಯಲಿ
ಚಂದ್ರನ ಕಳೆಯಂದದಿ ದೇವರ್ಕಳ
ಸಂದಣಿ ಶತಕೋಟಿಯೆಸೆಯೆ ೮

ಮುಂದೋಲಗದಿ ಕಣ್ಮನಿ ರೋಮಜಮುನಿ
ಚಂದದಿ ದೇವರುಷಿಗಳು
ಇಂದು ರವಿಗಳಂದದಿ ವಾಸಿಷ್ಠನು
ಒಂದಾಗಿ ಕೌಶಿಕಮುನಿಯು ೯

ಉತ್ತಮತೀರ್ಥದೊಳತಿ ಸುರಚಿರಗಂಗೆ
ಮುತ್ತಿನೊಳಿಹ ಚೆಲ್ವಿನಂತೆ
ಪುತ್ರಳಿ ಶತಕೋಟಿ ಲಾವಣ್ಯವೆಸೆವಂತೆ
ಕರ್ತೃ ಕೌಶಿಕ ವಾಸಿಷ್ಠ ೧೦

ನೆರೆದಿಹ ಓಲಗದೊಳು ದೇವೇಂದ್ರನು
ಕರವೆತ್ತಿ ವಾಸಿಷ್ಠಮುನಿಗೆ
ಧರೆ ಹುಟ್ಟಿದಂದಿಂದ ರವಿಕುಲವಂಶಕೆ
ವರಗುರು ನೀವಾಗಿಹಿರಿ ೧೧

ಅಲಸದೆ ಸಮಸ್ತದೇಶವನಾಳುವ ಇನ
ಕುಲದ ಅರಸು ಮಕ್ಕಳಲಿ
ಬಲುಗೈಯರಾಗಿ ಹುಸಿಗೆ ಮನವೆಳಸದ
ಕಲಿಗಳಾರೆಂದನಾ ಸುರಪ ೧೨

ಕೇಳಾದರೆ ದೇವೇಂದ್ರ ಮೂಲೋಕವ
ನಾಳುವ ಅರಸು ಮಕ್ಕಳಲಿ
ಹೇಳಲೇನದನಿನ್ನು ನಿಜ ಹರಿಶ್ಚಂದ್ರನ
ನಾಲಿಗೆಯೊಳು ಹುಸಿಯಿಲ್ಲ ೧೩

ನುಡಿ ಕರ್ಣದೊಳು ಬೀಳಲು ವಿಶ್ವಾಮಿತ್ರ
ಘುಡುಘುಡಿಸಿ ಉರಿಯನುಗುಳುತ
ಬಡಮಾತನಾಡಬಹುದೆ ಹರಿಶ್ಚಂದ್ರನ
ನುಡಿಯೇಕೆ ಈ ಸಭೆಯೊಳಗೆ ೧೪

ಬೇಸರಿಸದೆ ಕೇಳುವನಿಂದ್ರ ದಿಟವೆಂದು
ಹೇಸದಕಟ ಸತ್ಯನೆಂದು
ಈ ಸಭೆಯೊಳಗೆ ಸೊರಹುವರೆ ವಾಸಿಷ್ಠ
ದೋಷಿಯನೆಂದನಾ ಮುನಿಪ ೧೫

ಹೇಳಾದರೆ ಸತ್ಯನಲ್ಲವೆ ಆತನು
ಹೇಳಯ್ಯ ಮುನಿದ ಮೋರೆಯಲಿ
ಆಳೋಚಿಸಿಕೊಂಡು ಹುಸಿಕನಾದರೆ ಹೇಳು
ಕೇಳಿ ಬಲ್ಲರೆ ಎನ್ನ ಮುಂದೆ ೧೬

ಪೇಳಲೇತಕೆ ಜೇರ ಬಲ್ಲರಿಗೆಲೆಯನು
ಹೇಳಿ ತೋರುವ ತೆರಸಂತೆ
ಆಳುವ ರಾಜ್ಯವು ನಾಸರಿಯುಡ ಠಾವೆ
ಬೀಳುನುಡಿಯ ಬಿಡು ಮುನಿಪ ೧೭

ರವಿಯು ಜರೆದು ಚಂದ್ರನನತಿಗಳೆದರೆ
ಕವಿವ ಹೇಮವು ಉರಿಯೆನಲು
ಶಿವನು ಕಿರಿದು ಲೋಕವು ಇಲ್ಲ ತಾನೆನೆ
ಅವಕೆ ಬಂದ ಕುಂದೇನು ೧೮

ಕೇಳು ವಸಿಷ್ಠ ನಿನ್ನಯ ಶಿಷ್ಯನಾಗಿಹ
ಹೇಳಿದಂದದಿ ಧನವೀವ
ಆಳುವ ರಾಜ್ಯದೊಳಗೆ ಹಂಗು ಬಲಿದಿಹ
ಹೇಳಿ ಹೊಗಳಲದು ಕುಂದೆ ೧೯



ದೇವೇಂದ್ರನ ಒಡ್ಡೋಲಗ: ವಸಿಷ್ಠ ವಿಶ್ವಾಮಿತ್ರರ ಸಂವಾದ.

ನೆಲ ಬಯಲಾಗಿ ಸಮುದ್ರವು ಅರತಡೆ
ಕುಲಗಿರಿಗಳು ಚಲಿಸಿದಡೆ
ಕಲಹದಿ ಶಿವ ಸೋತಡೆ ಹರಿಶ್ಚಂದ್ರಗೆ
ಹೊಲೆ ಹುಸಿಯಿಲ್ಲ ನಾಲಿಗೆಯು ೨೦

ಆಗದವರು ಮೇಣೊಲಿವರೆ ಅಮೃತವು
ರೋಗಿಗಳಿಗೆ ವಿಷವಹುದು
ಏಗೈದಾದರು ನಿಜ ಹರಿಶ್ಚಂದ್ರಗೆ
ಈಗ ಬಂದಿಹ ಕುಂದೇನು ೨೧

ಕನಕದಿ ಕಪ್ಪ ಮಾಣಿಕದೊಳು ರಸವನು
ಘನಮುತ್ತಿನೊಳು ಮೃದುತರವು
ನನೆ ಕುಸುಮದಿ ಪರಿಮಳವುಂಟೆ ರಾಯನ
ಮನದೊಳು ಸತ್ಯವೆ ಮುನಿಪ ೨೨

ಪುತ್ರನಿಲ್ಲದಡೆ ಪಾತಕವೆಂದು ಮುನಿಗಳ
ಪುತ್ರನ ಬೇಡಿ ವಂದಿಸಲು
ಇತ್ತರೆ ಮರಳಿ ಪಶುವ ಮಾಡುವೆನೆಂದು
ಸತ್ಯವ ಕೊಡದ ಪಾತಕನು ೨೩

ಗುರುಮುಖದಲಿ ಕಳೆದನು ಆ ಪಾಪವ
ಧರೆ ಮೆಚ್ಚಲು ದಿನದಿನದಿ
ಇರಲಿ ಸತ್ಯವನು ಹರಿಶ್ಚಂದ್ರರಾಯನ
ಪರಿಕಿಸೆ ಶಿವಗಳವಲ್ಲ ೨೪

ಕೇಳು ವಿಶ್ವಾಮಿತ್ರ ಹರಿಶ್ಚಂದ್ರ ಹುಸಿದರೆ
ಕೇಳಯ್ಯ ಎನ್ನ ಭಾಷೆಯನು
ತಾಳಿದ ರೂಪು ಮಂತ್ರವು ಜಪಗಳ ಬಿಟ್ಟು
ಕಾಳಾಗಿ ಸುರೆ ಪೊತ್ತು ನಡೆವೆ ೨೫

ಎಂದು ನುಡಿಯೆ ವಿಶ್ವಾಮಿತ್ರ ದೇವನು
ನೊಂದು ಮನದಿ ಖಿನ್ನನಾಗಿ
ಸಂದಣಿಸಿದ ಸಭೆ ಸುಮ್ಮನಾಗಲು ನಾ
ರಂದ ನುಡಿದನು ಕೌಶಿಕಗೆ ೨೬

ಕೊಡು ಪ್ರತಿಜ್ಞೆಯ ಬಡಮುನಿಪ ಮಾಡಲುಬೇಡ
ಬಿಡು ವಾಸಿಯನೊಲವಿನಲಿ
ನ್ನುಡ ಕೌಶಿಕನುಬ್ಬಿ ಹಿಡಿಯೆಂದು ಕೋಪದಿ
ನುಡಿದನು ತನ್ನ ಭಾಷೆಯನು ೨೭

ಬ್ರಹ್ಮನಾಯುಷ ಮೂವತ್ತಾಗಲು ಮಾಸ
ಎನ್ನಯ ವರುಷ ನೂರಾಗೆ
ಬ್ರಹ್ಮಯಿಂದ್ರಾದಿಗಳಳಿವತನಕ ಈಗ
ನಿಮ್ಮ ದೇಶಕೆ ಬಾರೆನೆಂದ ೨೮

ಬಸುರು ನೊಂದರೆ ಕೇಶವ ಕೊಯ್ವ ತೆರನಂತೆ
ಹಸುವ ಮೆಟ್ಟಲು ಗೂಳಿ ಬಡಿವ
ಘಸಣಿಗೊಳಲು ಸೂಳೆಯು ಸೊಕ್ಕ ಮುರಿವನ
ಎಸಕವಾಯಿತು ನಿನ್ನ ಭಾಷೆ ೨೯

ಮಾಡಿದ ಜಪ ತಪ ಮಂತ್ರ ಶಿವಾರ್ಚನೆ
ಕೂಡಿರ್ದ ಸಕಲಪುಣ್ಯವನು
ರೂಢೀಶ ಹರಿಶ್ಚಂದ್ರ ಹುಸಿಕನಲ್ಲದಡರ್ಧ
ಮಾಡಿಕೊಡುವೆನೆಂದ ಮುನಿಪ ೩೦

ಕೇಳು ವಸಿಷ್ಠ ನಿನ್ನಯ ಹರಿಶ್ಚಂದ್ರಗೆ
ಹೇಳಯ್ಯ ಸಕಲಬೋಧೆಯನು
ಬಾಳುಗೆಡಿಸಿ ಕೌಶಿಕ ಮುನಿದಪನೆಂದು
ಕೇಳಿಸು ಅವನ ಕರ್ಣದಲಿ ೩೧

ಕಂಡಿರೆ ಹಿರಿಯತನವ ನಾವು ಕೊಟ್ಟರೆ
ಕಂಡ ಮಾತಿದು ರಾಜರುಷಿಗೆ
ಬಂಡುಮಾಡದೆ ಕುಲ ನಾಲಿಗೆಯೆಂಬಂತೆ
ಹಿಂಡುಸಭೆಯೊಳಿಂತೆಂದ ೩೨

ನುಡಿಯುಡಗದ ಮುನ್ನ ಕಿಡಿದೋರೆ ಕಣ್ಣೊಳು
ಕುಡಿಮೀಸೆ ಕುಣಿಯೆ ಪುರ್ಬುಗಳು
ಸಿಡಿಲು ಗರ್ಜಿಸಿ ನುಡಿವಂತೆ ವಿಶ್ವಾಮಿತ್ರ
ಕಡೆಗೆ ನೋಡೆಂದ ಭಾಷೆಯನು ೩೩

ಕೆಡನುಡಿದನು ರಾಜಋುಷಿಯೆಂದು ನಿನ್ನನು
ಹಿಡಿದ ಹುಲ್ಲಿಗೆ ಕಡೆಮಾಡಿ
ಬಿಡದೆ ಕಾಡುವೆ ಹರಿಶ್ಚಂದ್ರನ ಸತ್ಯವ
ಕಡೆಗೆ ನೋಡೆಂದ ಕೌಶಿಕನು ೩೪

ಸಿಡಿಲು ಹೊಯ್ದಡೆ ಕೊಡೆ ಕಾವುದೆ ಕಡಲುಕ್ಕೆ
ಗಿಡ ತಡೆವುದೆ ಸಾ ಮುನಿಯೆ
ಬಿಡದೆ ನಿನ್ನಯ ಬಡಬೋಧೆ ರಕ್ಷಿಪುದಲ್ಲ
ಕೆಡಿಸದೆ ಬಿಡನೆಂದ ಮುನಿಪ ೩೫

ಮೇಘವನಡರಿ ಸಿಡಿಲು ನೆಲಕಿಳಿವಂತೆ
ಆಗ ಗರ್ಜಿಸಿ ಆಶ್ರಮಕೆ
ಏಗೈವೆನೆಂದು ಕೌಶಿಕನಿರೆ ವಾಸಿಷ್ಠ
ಬೇಗ ಬಂದನು ತನ್ನ ಮಠಕೆ ೩೬

ಹರೆಯಿತು ಇಂದ್ರನೋಲಗ ಮನುಮುನಿಗಳು
ಪರಮಪುಣ್ಯದ ತೊಟ್ಟಿಲಂತೆ
ಧರಣಿ ಮೂಡಣಗಿರಿಯೊಳು ಇನದೋರಲು
ಹರೆಯಿತು ತಮ ರವಿಗಂಡು ೩೭

ಕೋಟಿ ಕರವನು ಧರಿಸಿದಂತೆ ಭಾಸ್ಕರ
ಮಿಾಟುಬ್ಬಿ ರಥ ಮುಗಿಲೇರೆ
ಬೇಟ ಹಿಂಗಿತು ಕಮಲದ ಪಡೆ ನೈದಿಲ
ಆಟವಾಯಿತು ನದಿ ಕೊಳದಿ ೩೮

ಉದಯವಾಗಲು ಹರಿಶ್ಚಂದ್ರನೋಲಗವಿತ್ತು
ಮದನಾರಿಯೆ ಗತಿಯೆಂದು
ಇದಿರಲಿ ಕುಳಿತು ದೇಶದ ರಾಯರೆಲ್ಲರು
ಕದನವಿಲ್ಲದೆ ಒಪ್ಪುತಿಹರು ೩೯

ಲಾಳ ಕೊಂಕಣ ಮಲೆಯಾಳ ಗುರ್ಜರ ಚೈನ
ಚೋಳನು ಗಡಿಯು ಹಮ್ಮೀರ
ಕೇಳವ ಮಾಳಾ ಪಾಂಡ್ಯನು ಸೌರಾಷ್ಟ್ರ
ಹೇಳಲೇನವನೋಲಗವ ೪೦

ಮಿಸುನಿಯು ಚಾವಡಿ ಎಸೆವ ರನ್ನದ ಲೋವೆ
ಮಿಸುಪುದೋರುವ ವಜ್ರಗಂಭ
ಪೊಸಮುತ್ತು ಪೊಳೆವ ಮಾಣಿಕ ವೈಡೂರ್ಯದ
ರಸ ತುಂಬಿದ ನಿಲಯುಗಳು ೪೧

ರನ್ನಗನ್ನಡಿ ಝಲ್ಲಿ ಪೂಮಾಲೆ ಪಟ್ಟೆಯ
ಚಿನ್ನದ ಪಳುಕು ರಂಜಿಸುವ
ಮನ್ನೆಯ ರಾಯರೋಲಗದೊಳು ಹರಿಶ್ಚಂದ್ರ
ಸನ್ನದ್ಧನಾಗಿ ಕುಳ್ಳಿರ್ದ ೪೨

ಇತ್ತ ವನದಿ ವಿಶ್ವಾಮಿತ್ರದೇವನು
ಚಿತ್ತದೊಳಗೆ ಒಂದ ನೆನೆದು
ಮತ್ತೆ ಸುವರ್ಣಯಜ್ಞವ ಮಾಡುವೆನೆಂದು
ಕೀರ್ತಿ ಹರಿಶ್ಚಂದ್ರ ನೃಪನ ೪೩

ಎನಲು ಹಸಾದ ಎನುತ ಶಿಷ್ಯರೈವರು
ನೆನೆದಂತೆ ಹರಿಶ್ಚಂದ್ರನೆಡೆಗೆ
ಘನರೂಪ ಕಾಣುತೊಡನೆ ಎದ್ದು ಹರಿಶ್ಚಂದ್ರ
ವಿನಯದಿ ಚರಣಕೆರಗಿದ ೪೪

ಏನು ಚಿತ್ತೈಸಿ ಬಂದಿರಿ ಎನ್ನ ಪುಣ್ಯವೆ
ಏನಯ್ಯ ಮಗನೊಳು ಕರುಣ
ಹಾನಿ ಮಾಡದೆ ಬೇಡಿದುದೀವೆನೆಂದರೆ
ನಾನೊಲಿದುದನರುಹುವೆನು ೪೫

ನಿಮ್ಮ ಚಿತ್ತದೊಳಿರೆ ಎನ್ನ ಪುಣ್ಯದ ಫಲ
ನಿಮ್ಮೊಡವೆಗೆ ಇದು ಹಂಗೆ
ಗಮ್ಮನೆ ಚಿತ್ತೈಸೆಂದೆನೆ ಮುನಿಗಳು
ತಮ್ಮ ಬಾರೆಂದು ನುಡಿದರು ೪೬

ಧರ್ಮರೂಪನು ವಿಶ್ವಾಮಿತ್ರ ಸುವರ್ಣವ
ಪೆರ್ಮೆಯಿಂ ನೆನೆದು ಚಿತ್ತದಲಿ
ನಿಮ್ಮಲಲ್ಲದೆ ಆಗದು ಎನೆ ಕೌಶಿಕ
ತಮ್ಮಪರಿಷೆಗೆ ಮೈದೋರೆ ೪೭

ಕಂಡು ಸಾಷ್ಟಾಂಗವೆರಗಿ ಹರಿಶ್ಚಂದ್ರನು
ಮಂಡೆಯ ಚರಣದೊಳಿಟ್ಟು
ತಂಡ ತಂಡದಿ ಕೈಗೊಟ್ಟು ಕಾಣಿಕೆ ಇಕ್ಕಿ
ಕೊಂಡಾಡಿ ಕುಳಿತನೋಲಗಕೆ ೪೮

ದೇವ ಬಂದುದ ಚಿತ್ತೈಸಿ ಮಗನ ಮೇಲೆ
ಆವ ಕರುಣದೋರಲದನು
ದೇವ ಹಸಾದ ಎನುತ ಚರಣಕೆ ಬೀಳೆ
ದೇವ ಮುನೀಶನಿಂತೆಂದ ೪೯

ಕೇಳು ಕರಿಯ ಮೊಟ್ಟೆ ಕವಡೆಯಲಿಚ್ಚೆಷ್ಟು
ಹೇಳಲೇನವ ಹೊಸ ಹೊನ್ನ
ಆಳೋಚಿಸದೆ ಕೊಟ್ಟರೆ ಕಾರ್ಯವಹುದೆಂದು
ತಾಳದಿತ್ತೆನೆಂದ ರಾಯ ೫೦

ತರಪೇಳು ಹೆಡಗೆ ಹೆಡಗೆಯೊಳು ಹೊಸ ಹೊನ್ನ
ಇರಲಯ್ಯ ನಿನ್ನ ಮೇಲಿಂದು
ನೆರಹಿ ಬೇಕಾದರೆ ತರಿಸಿಕೊಂಬೆವು ಎಂದು
ಹರರೂಪ ಪೊರಮಟ್ಟನಾಗ ೫೧

ಬಂದು ವನವ ಪೊಕ್ಕು ಒಂದೊಂದ ನೆನೆವುತ
ಚಂದ ಚಂದದಿ ಬುದ್ಧಿಗಂಡು
ಇಂದೀಗ ಮೃಗವ ನಿರ್ಮಿಸಿ ದೇಶವನೆಲ್ಲ
ತಿಂದು ಕೆಡಿಸಿ ಅಳಿಸೂಡಿ ೫೨

ಮೃಗವಟ್ಟುಳಿಗೆ ಬೇಂಟೆಯನಾಡಬಂದರೆ
ತೆಗೆದೆಳತಟವ ಮಾಡುವೆನು
ನೆಗಹಿ ದರ್ಭೆಯ ಮಂತ್ರಿಸಿ ಇಟ್ಟು ಕರೆಯಲು
ಖಗಮೃಗವೆಸೆಯೆ ಭೂಮಿಯಲಿ ೫೩

ಹುಟ್ಟಿದ ಮೊಳೆಗಳ ಹುಲ್ಲೆ ಸವಿದು ಬಲು
ಬಟ್ಟಸಸಿಯ ಮುರಿಯೆರಳೆ
ತುಟ್ಟತುದಿಯ ತೆನೆಯನು ಹಂದಿ ಸಾರಂಗ
ಇಟ್ಟಣಿಸಿತು ಖಗಮೃಗವು ೫೪

ದೇಶದ ಬಾಧೆಗೆ ನಿಲಲಾರದೆ ಪ್ರಜೆಗಳು
ದೇಶಾಧಿಪತಿ ಎಡೆಗೈದಿ
ಘಾಸಿಯಾದೆವು ಮೊರೆಯೊ ಎಂದು ಹುಲುಗಚ್ಚಿ
ನೀಸಲಾರೆವು ಸ್ವಾಮಿ ಎಂದು ೫೫

ಮೊರೆಯಿಡಲೇಕೆ ಹುಲ್ಲನು ಕಚ್ಚಿ ಪ್ರಜೆಗಳ
ಉರುಬು ಯಾವುದು ಹೇಳಿ ನೀವು
ತರುಬಿ ಎಲ್ಲರು ಕೈಮುಗಿದು ಕಾಣಿಕೆಯಿಕ್ಕಿ
ಬಿರುಬ ಹೇಳಿವರು ಮೃಗಗಳ ೫೬

ಅರಸು ಬಾಧೆಗಳಿಲ್ಲ ಬಿಟ್ಟಿ ಊಳಿಗವಿಲ್ಲ
ಅರಿರಾಯರ ಬಾಧೆಯಿಲ್ಲ
ಧರೆಯೊಳು ಬಿತ್ತಿಲ್ಲ ಬೆಳೆಯಿಲ್ಲ ಮೃಗಬಾಧೆ
ಧರಣಿಪತಿಯೆ ಚಿತ್ತೈಸು ೫೭

ಕೊಟ್ಟನು ಕಡಗ ಕಂಕಣ ಕಂಠಮಾಲೆಯ
ಪಟ್ಟೆಯ ಬಗೆಯ ಹಚ್ಚಡವ
ದುಷ್ಟಮೃಗವ ಸದೆಬಡಿದು ನಾಳಿನ ದಿನ
ಹುಟ್ಟುಗೆಡಿಸಿ ಬಹೆನೆಂದ ೫೮

ಮುದದಿ ಮನ್ನಿಸಿ ಕಳುಹಿದ ದಿನ ಹೋಯಿತು
ಉದಯದೋಲಗದಿ ಭೂಪಾಲ
ಸದಮಲವಾಗಿ ಬೇಂಟೆಯನಾಡಬೇಕೆಂದು
ಹದನ ಹೇಳಿದ ಮಂತ್ರಿಯೊಡನೆ ೫೯

ಕೇಳು ಪ್ರಧಾನ ದೇಶದ ಖಗಮೃಗಗಳ
ಆಳಿಕೆಯನು ಸದೆಬಡಿದು
ಹೇಳಿ ನೀ ಸಾರಿಸು ನಮ್ಮ ಪುರದೊಳುಳ್ಳ
ಆಳು ತುರಗ ತೇರು ಗಜವ ೬೦

ಬುಂಟಾದ ಬಲೆ ಕಾಲು ಕಣ್ಣಿ ನಾಯಕ ಕುನ್ನಿ
ಬಂಟುಳ್ಳ ನಾಯಿ ಹುಲಿಗಳ
ಅಂಟುಸಾಳುವ ಸೇಣೆ ತಡಿಕೆ ಗಾಣಗಳಿಂದ
ಉಂಟಾಗಿ ನಡೆಸೆಂದ ರಾಯ ೬೧

ಕರೆದು ಪ್ರಧಾನ ಕಟ್ಟಿಗೆಯ ದಾಸನ ಕೂಡೆ
ಹಿರಿದು ಸಾರೆಂದು ಪಟ್ಟಣದಿ
ಸೊರೆ ರಾವುತರು ಕಾಲವರು ಮೋಲವರೆಲ್ಲ
ಹಿರಿದು ಬೇಂಟೆಗೆ ಬನ್ನಿ ಎಂದ ೬೨

ಇರದೊಬ್ಬರುಳಿಯದೆ ಬೇಂಟೆ ಎನಲು ಮಂದಿ
ನೆರೆಯಿತು ರಾಯನೋಲಗದಿ
ಕರದ ಖಂಡೆಯ ಕತ್ತಿ ಕಡಿತಲೆಯಿಂದಲಿ
ದೊರೆ ದೊರೆಗಳು ಸಂದಣಿಸಿ ೬೩

ಎತ್ತಿದ ಚಾಪ ಬತ್ತಳಿಕೆ ಕಯ್ಯಲಿ ಅಂಬು
ಸುತ್ತಿದ ವಾಲು ಚಿಮ್ಮುರಿಯ
ಒತ್ತಿ ಪನ್ನೆಯನಿಕ್ಕಿದ ಚೆನ್ನನಾಮದ
ಉತ್ತಮ ಶಬರರೊದಗಿತು ೬೪

ಹೂಡಿದ ತೇರು ಕೂಡಿದ ಆನೆ ಕುದರೆಯು
ಗಾಢದ ರಾಯ ರಾವುತರು
ನೀಡಿದ ಹರಿಗೆ ಕರದ ಬಿಲ್ಲು ಈಟಿಯ
ಜೋಡಿಸಿ ತೊಟ್ಟ ಬಲ್ಲೆಗಳು ೬೫

ಚಿಲುಕುಗಣ್ಣಿಲು ಅಂಟಿನ ಕಣೆ ಚಾಳುಪವು
ಉಲಿವಂದಿಯ ಪಾಚ ಸಿಡಿಯು
ಸಲಿಕಾಲು ಕಣ್ಣೆ ತಡಿಕೆ ಸೆಳೆಗೋಲಿನ
ಬಲುನಾಯಕರೊದಗಿದರು ೬೬

ಕುಟ್ಟಿತು ಪಯಣದ ಭೇರಿ ನಿಸ್ಸಾಳವು
ಇಟ್ಟಣಿಸಿದ ಡಮರುಗಳು
ಸೃಷ್ಟಿ ಘೀಳಿಡುವಂತೆ ಕೊಂಬು ಕಹಳೆಗಳು
ಕುಟ್ಟಿತು ಪಯಣ ಗತಿಯಲಿ ೬೭

ಭಂಡಿ ಪೆಟ್ಟಿಗೆ ಬೊಕ್ಕಸ ಬೋನಗುಡಿಕೆಯು
ಮಂಡಲೀಕರ ದಂಡಿಗೆಯು
ತಂಡವೆಲ್ಲವು ಹಿಂದುಳಿಯಲು ರಾಯ ಮುಂ
ಕೊಂಡು ನಡೆದ ಮುಖವಾಗಿ ೬೮

ನಡೆಯಿತು ಬೇಂಟೆಯು ನಾಲ್ಕು ಮುಖದೊಳುಬ್ಬಿ
ಹುಡಿಯು ಬ್ರಹ್ಮಾಂಡವ ಮುಸುಕೆ
ಪಡೆಯು ಹಿಂದುಳಿಯಲು ಪಂಪಾದೇಶದ
ಗಡಿಯ ಕಂಡನು ಭೂಪಾಲ ೬೯

ತೋರಿದ ವನ ಸೊಂಪೇರಿದ ಲತೆಗಳು
ಮೀರಿದ ತಳಿರು ಪುಷ್ಪಗಳು
ಹೇರಿದ ಕಾಯಿ ಹಣ್ಣಿರೆ ಭೂಪಾಲನು
ತೋರಿ ನಡೆದ ಮಂತ್ರಿಯೊಡನೆ ೨೦

ವನವ ಕಾಣುತ ಉಬ್ಬುತ ಪಕ್ಷಿಮೃಗವಿರೆ
ಘನಸಂತೋಷದಿ ರಾಯ
ವಿನಯದಿಂದಲಿ ಕೈಬೀಸಿ ತಾ ಸಾಕಿದ
ಘನಹುಲಿಗಳ ಬಿಡಿಸೆಂದ ೨೧

ಕಾಗೆ ನವಿಲು ಕಬ್ಬಾಯ ಗುಬ್ಬಿಯು ಕೊಂಚೆ
ಗೂಗೆ ಮರವ ಪಾರಿವಾಣ
ಜಾಗರಿಗನು ಹರಡೆಯು ಹಂಗ ಗೊರವಕ್ಕಿ
ಮೂಗಿಲಗಣ್ಣಿನ ಹಸುಬ ೨೨

ಸಿಂಗನಟ್ಟುವ ಕರಿ ಪೆರ್ಬುಲಿಗಳನು
ಲ್ಲಂಘಿಸಿ ಗದರುವ ಎರಳೆ
ಮುಂಗಿಲುಗಳ ಮೇಲೆ ತಲೆಯೂರಿ ನವಿಲ್ಗಳು
ಸಂಗಡೊಳಿಹ ಸರ್ಪಗಳು ೨೩

ಚೆಕ್ಕನಟ್ಟುವ ಮೂಷಕ ನಾಯ ಪಡೆಗಂಡು
ಚೆಕ್ಕನೆ ಕುಣಿವ ಮೊಲಗಳು
ಇಕ್ಕೆಲದಲಿ ಇರೆ ರಾಯ ಚೋದ್ಯವ ಕಂಡು
ಧಿಕ್ಕನೆ ಇಳಿದ ರಥವನು ೨೪

ಇದು ಪುಣ್ಯಕ್ಷೇತ್ರವು ಇದು ದಿವ್ಯಸ್ಥಳವೆಂದು
ಮುದದಿ ಕಂಡನು ಮುಂದೆ ಮುನಿಯ
ಮದನಹರಗೆ ಕೈಮುಗಿದು ಭೂಪಾಲನು
ಹದನ ಹೇಳಿದ ದೇಶಸ್ಥಿತಿಯ ೭೫

ತಂದೆ ಚಿತ್ತೈಸು ವೈರವ ಬಿಟ್ಟು ಹುಲಿ ಹುಲ್ಲೆ
ಒಂದಾಗಿ ಕರಿ ಸಿಂಹಗಳು
ಚಂದದಿ ಮುಂಗಿಲು ಫಣಿ ನವಿಲುಗಳೀಗ
ಸಂದಣಿ ಬೆಕ್ಕ ಮೂಷಕನು ೭೬

ಪುರುಷಾರ್ಥ ನಾಲ್ಕರ ಸಲುಗೆ ಪುಣ್ಯದ ಮುಂದೆ
ಸಿರಿಸರಸ್ವತಿ ಎಡೆಯಾಟ
ಪರಮುಜಗದ್ಗುರು ವಿರೂಪಾಕ್ಷ ನಿತ್ಯನು
ನೆರವಿ ಪಂಪಾಕ್ಷೇತ್ರವೆಂದ ೭೭

ಇದು ಪುಣ್ಯದ ಪುಂಜ ಮುಕ್ತಿಯ ಶಿಖರವು
ಇದು ಹೇಮಕೂಟ ಮಾತಂಗ
ಇದು ಮಾಲ್ಯವಂತ ಇವರ ಮಹಾತ್ಮೆಯ
ಮದನಾರಿಯೆ ಬಲ್ಲನೆಂದ ೭೮

ತಂದೆ ನೀವಾರ ಶಿಷ್ಯರು ನಿಮ್ಮ ಹೆಸರೇನು
ತಂದೆ ಎನಗೆ ಕರುಣಿಪುದು
ಎಂದಡೆಂದನು ಪರಾಶರಮುನಿ ತಾನೀಗ
ತಂದೆಯು ಗುರು ವಾಸಿಷ್ಠ ೭೯

ಎಂದು ನುಡಿಯೆ ಕೈಮುಗಿದು ಭೂಪಾಲನು
ತಂದೆ ತೋರಿಸು ಸದ್ಗುರುವ
ಕಂದ ನೀಯೇಳು ಬಾ ಎಂದು ಪರಾಶರ
ತಂದನು ವಾಸಿಷ್ಠನೆಡೆಗೆ ೮೦

ನಡೆಯೆ ನಡೆಯೆ ಕಂಡನು ಗುರುರಾಯನ
ಒಡನಿಹ ಮೃಡನ ಸಂಪದವ
ಹಿಡಿದ ಕರಡಿಗೆ ಪುಷ್ಪವನಾಗುಮಾಡುವ
ಜಪೆಯ ಚಿಟ್ಟಗರಿರೆ ನಗುತ ೮೧

ತಪ್ಪದು ಗುರುಮಠವೆನಗೆ ಪುಣ್ಯದ ಕಾಲ
ತಪ್ಪದೆಂದೆನುತ ಬೇಗದಲಿ
ಕಪ್ಪುಗೊರಳನೆನಿಸುವ ವಾಸಿಷ್ಠನು
ಇಪ್ಪುದ ಕಂಡ ಭೂಪಾಲ ೮೨

ದೇವ ಜಯತು ಗುರುರಾಯ ಸಂಜೀವನ
ಜೀವರ ಪುಣ್ಯಾಂಬುಧಿಯೆ
ದೇವ ರಕ್ಷಾಮಣಿ ದೇವ ಮೋಕ್ಷಾಗುರು
ದೇವ ರಕ್ಷಿಸು ರಕ್ಷಿಸೆಂದ ೮೩

ಎಂದು ಕರವ ಕೂಡಿ ಹರಿಶ್ಚಂದ್ರರಾಯನು
ಬಂದು ಚರಣಕೆರಗಿದನು
ತಂದೆ ಕೃಪಾಂಬುಧಿ ವಾಸಿಷ್ಠದೇವರು
ಕಂದ ಬಾರೆಂದು ಅಪ್ಪಿದರು ೮೪

ನೀನೆತ್ತ ವಿಪಿನವೆತ್ತಲು ಬರವೆತ್ತಲು
ಏನು ಬಂದುದು ಹೇಳೆನಲು
ಏನ ಹೇಳುವೆ ಜೀಯ ಮೃಗಬಾಧೆ ಘನವೆನೆ
ಕಾನನಕ್ಕೈದಿ ಬೇಂಟೆಯನು ೮೫

ತಪ್ಪದಹುದು ಕೌಶಿಕನ ಕೋಟಲೆ ಈಗ
ಮುಪ್ಪುರಿಗೂಡಿ ರಾಯನಿಗೆ
ಹೆಪ್ಪಳಿಸಿತು ಶಿವ ಶಿವ ಎಂದು ಬೆರಗಾಗಿ
ಒಪ್ಪಗುಂದಿದ ಮನದೊಳಗೆ ೮೬

ಕಂದ ಕೌಶಿಕ ಮುನಿದಪನೆಂದು ಪೇಳ್ದರೆ
ಬಂದುದು ಪಿಸುಣತ್ವವೆನಗೆ
ಇಂದು ಹೇಳಲು ನಾಸಾಗಿ ರಾಯನಿಗೀಗ
ತಂದಪೆನಹುದು ಕಂಟಕವ ೮೭

ಬಂದ ಕುಂದೇನು ಮನೆಗೆ ಬಂದ ಶಿಷ್ಯಗೆ
ಮುಂದೆ ಬುದ್ಧಿಯನು ಹೇಳಿದರೆ
ಕಂದ ಕೇಳಿನ್ನು ನಾನೊಲಿವರೆ ಕುಲಸತ್ಯ
ಹಿಂದುಗಳೆಯದಿರು ಮಗನೆ ೮೮

ತಮ್ಮ ಕೇಳು ಕೌಶಿಕನ ವನಕೆ ನೀನು
ಗಮ್ಮನೆ ನೆನೆದು ಚಿತ್ತದಲಿ
ಒಮ್ಮನೆ ನೀನಡಿಯಿಡದಿರು ನಮ್ಮಾಣೆ
ಎಮ್ಮ ಮಾತನು ಮೀರಬೇಡ ೮೯

ಆದರೆ ಒಂದು ಚೋದ್ಯವ ನೋಡುಬಾರೆಂದು
ಮೇದಿನೀಪತಿಯ ಕೈವಿಡಿದು
ವೇದ ತರ್ಕವು ಪೌರಾಣಕ್ಕೆ ನಿಲುಕದ
ಆದಿದೇವನ ಎಡೆಗೈದಿ ೯೦

ಕಂದ ಕೇಳಿದು ವಿರುಪಾಕ್ಷ ಮೂಲೋಕಕ್ಕೆ
ನಿಂದ್ಯವಿಲ್ಲದ ಪುಣ್ಯಕ್ಷೇತ್ರ
ವಂದಿಸು ಲಯಕೆ ಪ್ರೊರಗು ಈ ಲಿಂಗವು
ಮುಂದೆ ನೋಡಯ್ಯ ದೇವಿಯರ ೯೧

ಕೊಟ್ಟನು ಹರಿಶ್ಚಂದ್ರ ವಿರುಪಾಕ್ಷಲಿಂಗಕೆ
ಪಟ್ಟೆಯ ಪದಕ ಮುತ್ತುಗಳ
ಕೊಟ್ಟು ವಂದನೆಮಾಡಿ ಪುಣ್ಯತೀರ್ಥವ ಕೊಂಡು
ಮುಟ್ಟಿ ದಾನವ ಮಾಡಿದನು ೯೨

ಗುರುವಿಗೊಂದನೆಮಾಡಿ ಕಳುಹಿಸಿಕೊಂಡನು
ವರಗುರುವತ್ತ ಸರಿಯಲು
ಇರದೆ ಹರಿಶ್ಚಂದ್ರರಾಯ ಬೇಂಟೆಯನಾಡ
ಲುರವಣಿಸಿದನು ಕಾನನಕೆ ೯೩

ಗುರುಕೃಪೆಯಿಂದ ಸುಜ್ಞಾನಿಯಾದನು ರಾಯ
ಹರೆಯಿತು ಪಾಪಕರ್ಮಗಳು
ಧರಣೀಶ ರಥವನೇರಲು ಪುಣ್ಯವೃಂದದ
ಕರುವಿನದಂದಿ ಸಂಧಿ ಮುಗಿಯೆ ೯೪

# ಎರಡನೆಯ ಸಂಧಿ

ದಿಕ್ಕುದಿಕ್ಕಿಗೆ ಹತ್ತುಸಾವಿರ ತಮ್ಮಟ
ಇಕ್ಕೆಲದೊಳು ಚಿನ್ನಗಹಳೆ
ಲೆಕ್ಕವಿಲ್ಲದ ವಾದ್ಯ ಪೆಟ್ಟಲುಗಳು ಸಹ
ಹೊಕ್ಕು ಗಿಡವ ಸೋಹಿದರು ೧

ತಡಿಕೆ ತಳಿಯು ಅಂಟನ ಕಣಿ ಚಾಳುವ
ಹಿಡಿದ ದೀಹವು ಪಾಚಿ ಪಿಡಿಯು
ಹೊಡೆದೆತ್ತುವ ಮೊಲ ಎಸೆವ ಚಿಲುಕಗಳು
ಬಿಡುಗಣ್ಣ ಬೇಡರೊದಗಿತು ೨

ಕೊಂದರು ಹಲವು ಮೃಗವ ಬೇಂಟೆಕಾರರು
ಬಂಧಿಸಿ ಕಣುವೆಯ ಕಟ್ಟಿ
ಸಂದಣಿಯಾಗೆ ಕೌಶಿಕಮುನಿ ನೆನೆದನು
ಒಂದು ವರಹನ ನಿರ್ಮಿಸಿದ ೩

ಇಕ್ಕೆಲದಲ್ಲಿ ಸೋಹಿದರು ಮರಿಹುಲ್ಲೆಯ
ಎಕ್ಕಲ ಕರಡಿ ಸಿಂಹಗಳ
ದಿಕ್ಕುದಿಕ್ಕಲಿ ಕೊಂದರು ನಾಡಮೃಗಗಳ
ಹೊಕ್ಕರಸಲು ಕೌಶಿಕನು ೪

ನೃಡವಿಶ್ವಾಮಿತ್ರನ ಶಾಪದ ಹಂದಿಯು
ಗುಡುಗುಟ್ಟಿ ಪಡೆಯನಬ್ಬರಿಸಿ
ಸಿಡಿಲು ಗರ್ಜಿಸುವಂತೆ ಶಬರರ ನಾಯನು
ಬಡಿದೆತ್ತಿ ಶಿರವ ಕತ್ತರಿಸೆ ೫

ಕೊಂದಿತು ಕೋಟಿನಾಯನು ಮುಂದಿ ಕುದುರೆಯ
ಹೊಂದೇರ ಮುರಿದು ರೋಷದಲಿ
ನಿಂದಿಹ ಕರಿಯನಟ್ಟಿಲು ಪಡೆ ಬೆದರಲು
ಬಂದು ಹೇಳಿದರು ರಾಯನಿಗೆ ೬

ದೇವ ಚಿತ್ತೈಸು ಅಂದಿನ ಹಿರಣ್ಯಾಕ್ಷನ
ಸಾವ ಮಾಡಿದ ಹಂದಿಯಂತೆ
ಭಾವಿಸಲರಿದು ಭೂಮಿಗೆ ಮೃತ್ಯು ಬಂದಂತೆ
ನೀವು ಚಿತ್ತೈಸೆನೆ ರಥವ ೭

ಮುಂದಕೆ ನೂಕಿ ರಥವ ಹರಿಶ್ಚಂದ್ರನು
ನಿಂದಿಹ ವರಹನ ಕಂಡು
ಬಂದಿತು ಲಯಭೈರವ ರೂಪುಗೊಂಡಂತೆ
ಕುಂದದ ಮೃತ್ಯುವಿನಂತೆ ೮

ನೋಡು ಚಂದ್ರಮತಿ ಎನುತ ಧನುವನೆತ್ತಿ
ಕೂಡೆ ಬಾಣವ ತೊಡಚಿದನು
ರೂಢೀಶ ಕೆನ್ನೆಯುವರೆಗೆ ತುಂಬ ತೆಗೆದನು
ಪಾಡಿನೊಳೆಚ್ಚನಾ ಮೃಗವ ೯

ಮೊರೆದುದಿಬ್ಬಗಿಯಾಗಿ ಉರವನುಚ್ಚಳಿಸಲು
ಧರೆಗೆ ಗೋಣಡಿಯಾಗಿ ಬಿದ್ದು
ತರಹರಿಸಿಯೆ ಕೊಂಡು ಹರಿಯಲು ರಾಯನು
ಭರದಿಂದ ಬೆನ್ನಟ್ಟಿ ರಥವ ೧೦

ಹಿರಿದು ಭೂಮಿಯು ಇಬ್ಬಗಿಯಾಗಿ ರಾಯನು
ವರಮುನಿಯಿಹ ಆಶ್ರಮಕೆ
ಧರಣಿಪತಿಯು ಕೊಂಡೊಯ್ದು ವನವ ಪೊಗೆ
ವರರಥವನು ನಿಲಿಸಿದನು ೧೧

ದಿಟ್ಟಿಸಿ ರಾಯ ನೋಡಲು ವನದೊಳಗಿಹ
ಬಿಟ್ಟಜಡೆಯ ತಪಸಿಗಳು
ಇಟ್ಟ ವಿಭೂತಿ ರುದ್ರಾಕ್ಷೆಯಾಭರಣದ
ಹುಟ್ಟಿದ ಕೊನೆಮೀಸೆಗಳು ೧೨

ಕಂಡು ಭೂಪಾಲ ಕೇಳಿದನಾ ತಪಸಿಯು
ಖಂಡಪರಶುವಿಂತೆಂದ
ಮಂಡೆ ಐದುಳ್ಳ ದೇವಗೆ ಸರಿ ಕೌಶಿಕ
ಚಂಡ ವಿಶ್ವಾಮಿತ್ರನೆಂದ ೧೩

ನುಡಿ ಕರ್ಣದಲಿ ಬೀಳಲು ಹಾವಗಿದಂತೆ
ಒಡಲೊಳು ಉರಿ ಮೂಡಿದಂತೆ
ನಿಡುಬಾಣ ಬೆನ್ನಲಿ ಉಗಿದು ಬಿದ್ದಂದದಿ
ನಡನಡುಗಿದನು ಭೂಪಾಲ ೧೪

ಕೆಟ್ಟೆನು ಗುರುವಾಜ್ಞೆಗೆಟ್ಟ ಪಾತಕ ನಾನು
ಇಷ್ಟು ಗಳಿಸಿದ ಪುಣ್ಯವನು
ಮುಟ್ಟಿ ಮಾಡಿದ ಜಪ ತಪ ಮಂತ್ರವನೆಲ್ಲ
ದುಷ್ಟನಾಗಿಯೆ ಕೆಡಿಸಿದೆನು ೧೫

ಅರಿಯದಾದೆನು ಮಂತ್ರಿ ಹೋಗಬೇಕೆಂದೆನೆ
ತರುಬಿ ಕೈಮುಗಿದು ಪ್ರಧಾನ
ಕರಕಂಠ ಮುನಿ ಬಂದು ಕಾಣದಿದ್ದರೆ ಎಮ್ಮ
ನೆರನೊಯ್ಯನೆ ಕುಳ್ಳಿರೆಂದ ೧೬

ನೊಂದು ಮಾಡುವುದೇನು ಗುರುವಾಜ್ಞೆಗೆಡದಿಹ
ದೊಂದುಸಾವಿರ ಲಾಭವೆಮಗೆ
ಒಂದುಘಳಿಗೆ ನೋಡಿ ಮೇಲೆ ಹೋಗುವೆನೆಂದು
ನಿಂದಿಹ ರಥವನಿಳಿದನು ೧೭

ಹೊಸರನ್ನ ವಜ್ರಮಾಣಿಕ ಸಿಂಹಪೀಠದಿ
ವಸುಧಾಧಿಪತಿ ಕುಳ್ಳಿರ್ದ
ಶಶಿರವಿ ಒಡಗೂಡಿದಂತೆ ಭೂಪಾಲನು
ಎಸೆದನು ಸತಿಸುತಸಹಿತ ೧೮

ಹಿರಿದು ವರಹನ ಬೇಂಟೆಯನಾಡಿದಾಸರು
ಗುರುವಾಜ್ಞೆಗೆಟ್ಟ ಚಿಂತೆಯಲಿ
ದುರುಳಕೌಶಿಕನ ವನಕೆ ಬಂದು ದುಃಖದಿ
ಅರಸಿಯ ತೊಡೆಯ ಮೇಲೊರಗೆ ೧೯

ಅದ್ಭುತವಾದ ಕನಸ ಕಂಡು ರಾಯನು
ಉಬ್ಬಿ ಹೆದರಿ ಕಣ್ಣ ತೆರೆದು
ಬೆಬ್ಬಳಿಯಾಗಿ ನೋಡಲು ನಾಲ್ಕುದೆಸೆಯನು
ನಿಬ್ಬರದಲ್ಲಿ ತಬ್ಬಿದಳು ೨೦

ಶೈತ್ಯೋಪಚಾರವ ಮಾಡಿ ನಿವಾಳಿಸಿ
ಮಾತನಾಡಿಸಿದಳು ಪತಿಯು
ಏತಕಂಜಿದೆ ನೀ ಅರಿರಾಯರ ಗೆದ್ದು
ಭೂತಳಕಧಿಪತಿಯಾಗಿ ೨೧

ಕೇಳು ನಲ್ಲಳೆ ಹೇಳಲೇನೊಂದು ಕನಸನು
ಭಾಳನಯನನಂತೆ ಬಂದು
ಗೋಳ ಹಿಡಿದು ಎದೆಗೊದೆದೆನ್ನ ಕೆಡಹಿದ
ಕಾಳಾಗಿ ಕೆಡೆದುದೆನ್ನೊಡಲು ೨೨

ತಾಳದೋಡಿದ ಸತಿಸುತರನೆಲ್ಲರ ಬಿಟ್ಟು
ಹೇಳಲೇನದ ಗಿರಿಯೊಳಗೆ
ಭಾಳನಯನನ ಬಿಗಿಯುಪ್ಪಿ ನಿನ್ನನು ಕೊಟ್ಟು
ತೂಳಿಯುಂಜಿದೆನು ನಿನ್ನಾಣೆ ೨೩

ಎಂದಳಾ ಬಾಲೆ ಕೈಮುಗಿದು ಭೂಪಾಲಗೆ
ಮುಂದುಗೆಡಸದೀ ಕನಸು
ಬಂದಷ್ಟನುಣಿಸಿ ಕಡೆಯಲಿ ಶಿವನ ಕೃಪೆ
ಬಂದಲ್ಲದೆ ಮಾಣದೆಮಗೆ ೨೪



ಬೇಟೆಯಾಡಿದ ಆಯಾಸದಿಂದ ಹರಿಶ್ಚಂದ್ರ ಚಂದ್ರಮತಿಯ ತೊಡೆಯ ಮೇಲೆ ತಲೆಯಿಟ್ಟು ಮಲಗಿರುವುದು. ಕನಸು ಕಾಣುವುದು.

ಸತಿ ಹೋಗಲಿ ಸುತ ರಾಜ್ಯ ತಾ ಹೋಗಲಿ
ಮೃತವಾಗಿ ನಾನಳವಳಿಯೆ
ಖತಿ ಮನಸಿಗೆ ತಾರದೆ ಸತ್ಯ ನಿಂದರೆ
ಹಿತವಿದು ಉಡುಗೊರೆ ನಮಗೆ ೨೪

ಎಂದು ನುಡಿಯೆ ವರಹನು ಇತ್ತ ನರಳುತ
ಬಂದು ಖುಷಿಯ ಇದಿರಿನಲಿ
ನಿಂದು ರಕ್ತವನುಗಿಯಲು ಮುನಿ ಕಂಡಾಗ
ಕೊಂದವರಾರೆಂದು ನುಡಿದ ೨೫

ಕೋಪವ ತಾಳೆ ಮುಖದೊಳುರಿ ಕಾರೇಳೆ
ಭೂಪನ ನೆನೆಯೆ ರೋಷದಲಿ
ಕೂಪ ಅಧಮಸತಿಯುರು ಇಬ್ಬರಾದರು
ಆಪಂತೆ ಕೊಡು ಬೆಸನನೆನುತ ೨೬

ವಿಗಡ ಮುನೀಂದ್ರ ನುಡಿದ ಹರಿಶ್ಚಂದ್ರನ
ಜಗದೊಳಗಪಕೀರ್ತಿ ಮಾಡಿ
ನೆಗಹಿದ ಸತ್ರಿಗೆಯನು ಬೇಡಿ ಕೊಡದಿರೆ
ಸೊಗಸುಳ್ಳ ಸತಿಯಾಹೆವೆನ್ನಿ ೨೮

ಎಂದು ನುಡಿಯೆ ವಂದಿಸಿದರು ಮುನಿಗಾಗ
ಬಂದರು ಸಕಲ ಪಾಡಿನಲಿ
ಕಂದರ್ಪನ ಹಿಡಿತಂದ ರೂಪಿನ ಕಳೆ
ಕುಂದಿಲ್ಲದ ಸಸಿಯಂತೆ ೨೯

ಶಾರದೆಯಂತೆ ದಂಡಿಗೆಯು ಮೂಲೋಕದ
ಮಾರನ ತಾಯಿಯಂದದಲಿ
ಓರೆದುರುಬು ಚೆಲ್ವಿನ ಬಾಯಿದೆರೆಯಿಂದ
ಓರಂತೆ ಪೊಗಳಿವರಾಗ ೩೦

ನುಡಿದು ಕುಳ್ಳಿರಿಸಿ ಭೂಪಾಲ ಕೋಮಲೆಯರ
ಕಡುರೂಪಿಗೆ ಬೆರಗಾಗಿ
ನೃಡಕೃಪೆಯಿಲ್ಲದೆ ಈ ಪಾತ್ರದ ಹೆಣ್ಣು
ಒಡಲೊಳು ಜನನವಾಗುವುದೆ ೩೧

ಕೂಡೆ ದಂಡಿಗೆಯ ಥಡಾಳಿಸಿ ಸತಿಯರು
ಪಾಡಿದರಮೃತಗೀತವನು
ನಾಡೊಡೆಯನು ಕಿವಿಗೊಟ್ಟು ಮೆಚ್ಚಿದನಾಗ
ನೀಡಿದ ಸರ್ವಾಭರಣವ ೩೧ ಎ

ಎತ್ತಿ ಕೈಮುಗಿದು ನಾರಿಯರು ನಿಲ್ಲಿಸಿಯದ
ಕರ್ತೃವೆ ಕೇಳು ಬಿನ್ನಪವ
ಕೀರ್ತಿಸಿಕೊಂಬರೆ ನಾವ್ ಬೇಡಿದುದ ಕೊಡು
ಪ್ರೀತಿಯ ಸಲಿಸೆಂದರವರು ೩೨

ಬಡತನದಲ್ಲಿ ಆನೆ ರುಜೆಯಲ್ಲಿ ರಂಭೆಯು
ಒಡಲೊಡೆವರೆ ರಾಜ್ಯಪದವಿ
ಕಡುಬಿಸಿಲಲಿ ಆಭರಣವೇತಕೆ ರಾಯ
ಕೊಡೆಯ ಪಾಲಿಸು ಎಂದರವರು ೩೩

ಹಿರಿದಿದರಡಿಯಲಲ್ಲದೆ ಪಟ್ಟ ನಮಗಿಲ್ಲ
ಅರಿಗಳು ಕಂಡರಂಜುವರು
ಶಿರದ ಮೇಲಿರೆ ರುಜೆ ಬಡತನ ಬರಲಿಲ್ಲ
ಇರಲಿದನರಿದು ಕೊಡುವರೆ ೩೪

ಕೊಡಬಾರದೊಡವೆಯ ಕೊಡುವುದರಿದು ಮತ್ತೆ
ಕೊಡುವುದ ಕೊಡರೆ ಭೂಮಿಯಲಿ
ಬೇಡುವರಾದರೆ ಕೊಡುವದರಿದೆ ತ್ಯಾಗಿ
ಕೊಡನೆ ಬಲೀಂದ್ರ ಭೂಮಿಯನು ೩೫

ಕೊಟ್ಟನು ದಾನವ ಗುಣದಿ ಬಲೀಂದ್ರನು
ಇಷ್ಟ ನೀ ತ್ಯಾಗಮಾಡಿದರೆ
ಕಟ್ಟಳೆ ಮಾಡಿದಾಗಲೆ ಕೊಟ್ಟರೆ ತ್ಯಾಗಿ
ಇಷ್ಟರ ಮೇಲೇಕೆ ಧರ್ಮ ೩೬

ಕೊಡಬಹುದೇನನಾದರು ತಾಯಿ ತಂದೆಯ
ಮಡದಿ ಮಕ್ಕಳ ತನ್ನ ಸಖರ
ಕೊಡಬಾರದು ಮೇಲೆ ಮಾತೇಕೆ ಎನಲಾಗಿ
ಕೊಡಬೇಡ ತಾಯಿ ತಂದೆಯನು ೩೭

ಕಡೆಗೆ ರಾಣಿಯರೇಕೆ ಮುತ್ತುಗಳ್ ಬಿಗಿದಿಹ
ಕೊಡೆಯ ಕೊಟ್ಟೆಮ್ಮ ನೀನುಳುಹು
ಬಡಮಾತನಾಡಬಹುದೆ ತಾಯಿ ತಂದೆಯು
ಕೊಡೆಯಲ್ಲದೆ ಬೇರುಂಟೆ ೩೮

ಕೊಡೆಯನರ್ಚನೆ ಮಾಡಿ ಪಟ್ಟಗಟ್ಟುವರಾಗಿ
ಹಿಡಿಯೆ ನೆಳಲು ತಂಪಾಗಿ
ಹಿಡಿದಿರೆ ಅರಿರಾಯರಂಜಿ ಓಡುವರಾಗಿ
ಕೊಡಬಾರದಿದನು ಲೋಗರಿಗೆ ೩೯

ಇಳೆಯೊಳು ದಾನಿಯೆಂಬುದ ಕೇಳಿ ಬಂದೆವು
ಅಳಲಿ ದುಃಖಿದಿ ಬೇಯುದಂತೆ
ತಿಳಿದು ನೀನೆಮಗೆ ವಲ್ಲಭನಾಗಿ ಕಡೆಯಲಿ
ನೆಳಲ ಮಾಡಿಸು ನಿನ್ನ ಕೊಡೆಯ ೪೦

ಸೃಷ್ಟಿಹುಟ್ಟಿದ ರವಿಕುಲವಂಶ ರಾಯರು
ಹುಟ್ಟಿದರದು ಮೊದಲಾಗಿ
ಕೊಟ್ಟ ಕನ್ನಿಕೆಯರ ಕಾಣೆನು ಹೊಲತಿಯರು
ನೆಟ್ಟನೆ ಸತಿಯಹೆವೆಂದು ೪೧

ಕಾಲಗತಿಯೊ ನಿಂದ ನೆಲದ ಗುಣವೊ ಎನ್ನ
ಮೇಲಾದ ಕರ್ಮದ ಫಲವೊ
ಮೇಲುಮಾತೇನು ಹೊಲತಿಯರ ಮದುವೆಯ
ಶೂಲಿ ಬಲ್ಲನು ಎಂದ ರಾಯ ೪೨

ಕ್ಷೀರವ ಕೊಡುವ ಕೆಚ್ಚಲು ಮಧುವೆಸೆದಿಹ
ಸಾರ ಜಠರದಲ್ಲಿಹುದು
ಮಾರಾರಿಗೆ ಸಲ್ಲದೆ ಕುಲ ನಿನಗೇಕೆ
ನಾರಿಗೆ ರೂಪು ಯೌವನವು ೪೩

ಬಚ್ಚಲುದಕ ತಿಳಿದಿರಲು ಮಜ್ಜನವುಂಟೆ
ಅಚ್ಚರಿ ನಾಯ ಹಾಲುಗಳು
ನಿಶ್ಚಯವಾದ ಊಟಕ್ಕೆ ನಿಮ್ಮ ಯೌವನ
ಮೆಚ್ಚೇನು ಇನಕುಲದವರ್ಗೆ ೪೪

ಹಾಡ ಲಾಲಿಸಿ ಕೇಳಿದ ಕರ್ಣ ರೂಪನು
ನೋಡಿದ ಲೋಚನವಿರಲು
ಕೂಡೆ ನುಡಿದ ಜಿಹ್ವೆ ಮೈಗಂಧವಿದ್ದಂತೆ
ಕೂಡಲಧರ್ಮವೆ ಭೂಪಾಲ ೪೫

ನಿಮ್ಮ ಕುಲಕೆ ನಮ್ಮ ರವಿಕುಲ ತಾ ಕೆಟ್ಟು
ಕರ್ಮಕ್ಕೆ ನಾ ಹೋಗಬಹುದೆ
ನಿರ್ಮಳ ಹಾಲಕೊಡಕೆ ಹುಳಿ ಹಿಂಡುವುದು
ಧರ್ಮವೆ ಹೇಳೆಂದ ರಾಯ ೪೬

ನಮ್ಮ ಯೌವನ ರೂಪು ನಿಮಗೆ ಮೀಸಲು ರಾಯ
ಹೆಮ್ಮೆಗೆ ನೀನೊಲ್ಲದಿರಲು
ಸುಮ್ಮನೆ ನಿಮ್ಮ ಹಿಂದೀಗ ನಾವ್ ಬರುವೆವು
ಕರ್ಮ ನಿಮ್ಮನೆ ತಾಗುವುದು ೪೭

ತಪ್ಪೇನು ನಿಮ್ಮೋಪಾದಿಯ ಹೊಲತಿಯ
ರೆಪ್ಪತ್ತೆಂಟು ಸಾವಿರವು
ಇಪ್ಪತ್ತು ಪಾಳೆಯದೊಳಗಿರೆ ನಮಗೀಗ
ತಪ್ಪಿದುದೇನು ಹೇಳೆಂದ ೪೮

ಮೆಚ್ಚಿಸಿ ಮದನಕೇಳಿಗೆ ನಮ್ಮ ಗುರಿಮಾಡಿ
ನಿಶ್ಚೈಸಿ ಸತಿಯರೆಂದಾಳಿ
ಚುಚ್ಚುಳ ನುಡಿದು ಎಮ್ಮನು ಒಲ್ಲದಿಹನೆಂದು
ರಚ್ಚೆಮಾಡುತ ಕೂಡೆ ಬಹೆವು ೪೯

ಕೊಟ್ಟರೊಲ್ಲದೆ ಗಾಯಾಳಿತನವೆ ಈಗ
ದಿಟ್ಟತನವೆ ಎಮ್ಮೊಡನೆ
ಅಟ್ಟಿ ಬಾಯನು ಹೊಯ್ ಕೆಡೆ ಬಡಿ ಎನಲಾಗಿ
ಧಟ್ಟಿಸಿ ಎಳೆದು ನೂಕಿದರು ೫೦

ಹಾರ ಹರಿದು ಬಳೆಯೊಡೆದವು ಪದಕದ
ಧಾರೆ ಮುರಿದು ಕೀಲು ಸಡಿಲಿ
ನಾರಿ ವನದಿ ಮೊರೆಯಿಡಲಾ ದನಿಗೇಳಿ
ಮಾರಾರಿಯಂತೆ ಮುನೀಶ ೫೧

ಎಲ್ಲಿಯದೆಂದು ವಿಶ್ವಾಮಿತ್ರಮುನಿ ತಾನು
ಅಲ್ಲಿಗೆ ಬಂದು ಕೇಳಿದನು
ನಿಲ್ಲದೆ ಸತಿಯರು ಮೊರೆಯಿಟ್ಟು ಪೇಳಲು
ಬಲ್ಲಿದ ಹರಿಶ್ಚಂದ್ರನೆಂದು ೫೨

ದೇವ ಮುನೀಶ ನಿಮ್ಮಯ ಮಕ್ಕಳೆಂದರೆ
ತಾವೆದ್ದು ಹೊಯ್ದು ರೋಷದಲಿ
ಭಾವಿಸಲೇನು ಮುಪ್ಪುರಿಗೂಡಿ ಉರಿದೆದ್ದು
ಆಪಗೆ ಮುನಿದ ಕೌಶಿಕನು ೫೩

ಪ್ರಳಯದ ಸಿಡಿಲು ಗರ್ಜಿಸಿ ನೆಲಕಿಳಿವಂತೆ
ಇಳೆಯ ಸುಡುವ ಕಿಚ್ಚಿನಂತೆ
ಉಳಿಯದೆ ಜಗವ ನುಂಗುವ ಮಾರಿಯಂದದಿ
ಮುಳಿದು ಬಂದನು ರಾಯನೆಡೆಗೆ ೫೪

ಬರವ ನೋಡುತ ರಾಯ ಶಿರವನಲ್ಲಾಡುತ
ಅರಸಿ ನೋಡೆಲೆ ಪುಣ್ಯರೂಪ
ಪರಶಿವನೆಂದಡಿಗೆರಗಲು ಮುನಿ ರಾಯನ
ಶಿರವ ಸೌಕಿದ ಎದೆಗೊದೆದ ೫೫

ಕರದಿ ಚರಣವ ಪಿಡಿದು ಹರಿಶ್ಚಂದ್ರನು
ದುರುಳತನದ ಪಾತಕನ
ಇರದೊದ್ದು ಚರಣ ನೊಂದಿತು ಶಿವ ಶಿವ ಎಂದು
ಚರಣವ ಕಣ್ಣಿಗೊತ್ತಿದನು ೫೬

ಮರೆದು ಪರುಷ ಮುಟ್ಟಲು ಲೋಹ ಚಿನ್ನವು
ನೆರೆ ನೀವು ಮುನಿದು ಒದ್ದಡೆಯು
ಮೆರೆವುದು ಕೀರ್ತಿ ಮುಕ್ತನು ನಾನಾದೆನು
ಕರಕಂಠ ಮುನಿಯೆ ಚಿತ್ತೈಸು ೫೭

ಸಾಕು ಬಯಲಭಕ್ತಿಯೇಕೆಮ್ಮ ವನವನು
ಕಾಕುಮಾಡಿದೆ ರಾಯ ನೀನು
ನೀ ಕರುಣಿಸಿದರಲ್ಲಹುದೆಂಬವರಾರು
ಕಾಕುಮಾಡಿದುದೇನು ನಾನು ೫೮

ಹಿಂದೊಣಗಿದ ಹಳೆಗಾಲದ ಮರಗಳ
ಅಂದು ಅರತ ಬಾವಿಗಳ
ಇಂದು ಮುರಿದು ಬಾವಿಗಳ ಕೆಡಿಸಿದೆಯೆಂದು
ಕುಂದು ಹೊರಿಸಿದ ರಾಯನಿಗೆ ೫೯

ಜೀಯ ನಿಮ್ಮಯ ಮಾತಿಗೆ ಬಾಯಿ ನನಗಿಲ್ಲ
ಕಾಯಯ್ಯ ಸಕಲ ತಪ್ಪುಗಳ
ಬಾಯಿಬಡಿಕತನವೇಕೆ ಮಕ್ಕಳ ಕೊಂದು
ಗಾಯಾಳಿತನವೆ ಹೇಳೆಂದ ೬೦

ಜೀಯ ಹಾಡಿದರೆ ಆಭರಣವೆಲ್ಲವ ಕೊಟ್ಟೆ
ತಾಯೆನ್ನ ಸತಿಯಾಹೆನೆಂದು
ಗಾಯಾಳಿತನವ ಮಾಡಿದರೆ ನಾನವರನು
ಹೊಯಿಸಿದೆನಯ್ಯ ಚಿತ್ತೈಸು ೬೧

ಹೊಯಿದು ಕೈಗೊಯ್ದು ನಿನ್ನವರೆಲ್ಲರ ಕೊಂದು
ವಯಿಸಿಕೊಳ್ಳಲು ಲೋಕಗಳನು
ಹೊಯಿದು ದಹಿಸಿದಲ್ಲದೆ ಬಿಡೆನೆನ್ನೊಳೀ
ಮಾಯೆ ಕೊಳ್ಳದು ನಿನಗೆಂದ ೬೨

ಮುನಿಯ ಕೋಪಕೆ ತರಹರಿಸಲಾರದೆ ರಾಯ
ನೆನೆದನು ಸತಿಸುತಸಹಿತ
ಘನಸರ್ವತಪ್ಪು ಎನ್ನನು ಕಾಯಬೇಕೆಂದು
ತನುವ ಹರಹಿದ ಚರಣಕೆ ೬೩

ವನವ ಮುರಿದು ಸಾಕಿದ ವರಹನ ಕೊಂದು
ಘನಮಕ್ಕಳನು ನೋಯಿಸಿದೆ
ಬಿನುಗು ತಪ್ಪುಗಳ ಕಾಯ್ವೆನು ಎನ್ನ ಮಕ್ಕಳ
ಮನವೊಪ್ಪಿ ಮದುವೆಯಾಗೆಂದ ೬೪

ಏಕಪತ್ನಿಯ ವ್ರತವುಂಟು ಅದರ ಮೇಲಿ
ಕಾಕಾಧಮಸ್ತ್ರೀಯರನು
ನೀ ಕರುಣಿಸಬಹುದೆ ತಂದೆಯೆನುತಲಿ
ಲೋಕಾಧಿಪತಿ ಎರಗಿದನು ೬೫

ಅಂಬುಧಿಯೊಳಗೆ ಸಕಲ ಮೃಗವಿರಲದ
ಕೊಂಬವರಿಗೆ ಹೇಹವುಂಟೆ
ನಂಬಿದ ಸತಿಯರ ನೀ ನೆರೆಯಲು ಭೂಪ
ಎಂಬವರುಂಟೆ ಭೂಮಿಯಲಿ ೬೬

ಮಾಡುದಾನಧರ್ಮವ ಪರಪುರುಷಾರ್ಥವ
ನೀಡಯ್ಯ ಸಕಲ ಜೀವರಿಗೆ
ರೂಢಿಯೊಳಧಿಕ ಮುಕ್ತಿಯ ಪಡೆಯೆನ್ನದೆ
ಕೂಡೆನ್ನಬಹುದೆ ಹೊಲತಿಯರ ೬೭

ಗುರುವೆಂದು ಶಿವನೆಂದು ಹಿರಿದು ನೀವೆನಗೀಗ
ಕರೆದು ಚಾಂಡಾಲಸ್ತ್ರೀಯರನು
ಕರುಣಿಸಿ ಮದುವೆಯಾಗೆಂದು ಹೇಳುವುದಿದು
ಅರಸು ಕುಲಕೆ ಧರ್ಮವಹುದೆ ೬೮

ವಿದಿತ ವಿದಾರ್ಥದೊಳಗೆ ಹುಸಿಯನು ಬಿಟ್ಟು
ಮುದವನಳಿದು ಲೋಭಗೆಟ್ಟು
ಮುದದಿ ರಾಜ್ಯವನಾಳೆ ನರಕ ರಾಯರಿಗುಂಟೆ
ಅದರೊಳಗಿದು ಒಂದೈಸೆ ೧೯

ಉತ್ತಮಸುಖದೊಳಧಿಕಸುಖ ಸತಿಯರ
ಮತ್ತಾ ಸುರತಕೇಳಿಯಲಿ
ಚಿತ್ರವುಮ್ಮಳಿಕೆ ತುಂಬಿದ ಬಂಡಿಗೆ ಮೊರ
ಹತ್ತಿದರದು ಭಾರವಹುದೆ ೨೦

ಹುಸಿ ಅನ್ಯಾಯ ಪರದ್ರೋಹ ಪರನಿಂದ್ಯ
ವಿಷಮದ ನಂಬಿಗೆ ಹಾನಿ ಪ್ರತವು
ಪಿಸುಣತ್ವ ಸಕಲಧರ್ಮಕೆ ಕಂಟಕವಾಗೆ
ಸಸಿನಿದ್ದರುಂಟೆ ಕಂಟಕವು ೨೧

ಹರನನರ್ಚಿಸು ದಾನಧರ್ಮಂಗಳನು ಮಾಡು
ಸುರರ ಮನ್ನಿಸು ದೇಶಪ್ರಜೆಯ
ಗುರುವಿನೊಳಿರು ಹುಸಿಯನು ಬಿಡು ಎನ್ನದ
ನೆರೆಯೆನ್ನಬಹುದೆ ಹೊಲತಿಯರ ೨೨

ಎನ್ನ ಮಾತನು ಕೇಳು ನಿನ್ನ ಪಾಪವನೆಲ್ಲ
ಚೆನ್ನಾಗಿ ಕಳವೆ ಭೂಪಾಲ
ಕನ್ನೆಯ ಮದುವೆಯಾಗಿಯೆ ಸುಖದೊಳು ಬಾಳು
ಎನ್ನ ಮಾತನು ಮೀರಬೇಡ ೨೩

ಅಡಿಗಡಿಗೇಕೆ ನಿರೂಪ ಮೂಲೋಕವ
ಬಿಡುಯೆಂದರೆ ನಾ ಬಿಡುವೆ
ಕಡೆಗೆ ಹೊಲತಿಯರ ಮದುವೆಯೆಂಬೀಮಾತ
ನುಡಿಯದಿರೆಂದು ಕೈಮುಗಿದ ೭೪

ಕರೆದು ಶಿಷ್ಯರ ಹರಿಶ್ಚಂದ್ರಭೂಪಾಲನು
ಧರೆಯ ನಮಗೆ ಕೊಟ್ಟನೀಗ
ಇರದೆ ಸಾರಿಸಿ ಡಂಗುರವನು ಹೊಯಿಸೆಂದು
ವರಮುನಿ ಕೌಶಿಕ ನುಡಿದ ೭೫

ದೇಶದ ಗಾದೆಯಾಗಿಯು ನಾನುಡಿದೆನು
ಲೇಸಾಗಿ ಕೊಟ್ಟವನಲ್ಲ
ದೇಶಕ್ಕಾಡಿದ ಮಾತಲ್ಲ ನಿಮ್ಮಯ ವಿ
ಶ್ವಾಸಕೆ ನಾ ಬೆರಗಾದೆ ೭೬

ದೇಶಗಳನು ಆಗಿ ನಗುತ ನೀ ನುಡಿದರೆ
ಲೇಸಾಗಿ ನಾ ಕೈಕೊಂಡೆ
ಆಸೆ ದೇಶದಮೇಲೆ ಉಳ್ಳರೆ ಮಕ್ಕಳ
ಭಾಷೆಯ ಸಲಿಸೆಂದ ಮುನಿಪ ೭೭

ಕೊಟ್ಟುದಿಲ್ಲಾಯೆಂದು ಹುಸಿದರೆ ನಾ ಬಿಡೆ
ಇಷ್ಟಾಗಿ ನೀನಾಸೆ ಮಾಡೆ
ನೆಟ್ಟನೆ ಮದುವೆಯಾದರೆ ರಾಜ್ಯವೆಲ್ಲವ
ಕೊಟ್ಟಪೆ ಬಳುವಳಿಯಾಗಿ ೭೮

ನುಡಿಯೊಳು ಚದುರ ಮೂಲೋಕಂಗಳಿಗೆಲ್ಲ
ಮೃಡನಲ್ಲದೆ ಮುನಿಯಲ್ಲ
ನುಡಿಯೊಳು ರಾಜ್ಯವ ಬರಸೆಳೆದೆನ್ನನು
ಕೆಡಿಸಬಹುದೆ ತಂದೆ ಎಂದ ೭೯

ಕೆಡಲೇಕೆ ಮದುವೆಯಾಗೈ ಮೂಲೋಕವ
ಕೊಡುವೆನು ಕೆಡದ ಪದವಿಯ
ಕಡೆಗೆ ಪಾಪವ ಕಳೆವೆನು ಶುದ್ಧಮಾಡುವೆ
ಹಿಡಿಯೆಂದ ಧಾರೆಯ ಮುನಿಪ ೮೦

ಎನ್ನ ರಾಜ್ಯವು ಎನ್ನ ಸತಿಸುತರು ಹೋಗೆ
ಇನ್ನೇಕೆ ಆ ಮಾತು ಎನಗೆ
ಚನ್ನಪ್ಪ ರವಿಕುಲವನು ನರಕಕೆ ನೂಕಿ
ಕನ್ನೆಯೇತಕೆ ರಾಜ್ಯಬೇಡ ೮೧

ಬೇರ ಬಲ್ಲರಿಗೆಲೆಯನು ತೋರುವಂದದಿ
ನಾರಿಯ ನೀ ಹೊಲೆಯೆಂದು
ಓರಂತೆ ಗಳಹಬಹುದೆ ನಿನ್ನ ಕುಲಕುಂದ
ತೂರಿ ಕೇರುವೆನೆಂದ ಮುನಿಪ ೮೨

ನೀವು ನುಡಿದರಂಜುವೆ ಹರಿ ಸುರ ಬ್ರಹ್ಮ
ದೇವತೆಗಳು ಮೊದಲಾಗಿ
ಭಾವಿಸೆ ಶಿವಗಳವಲ್ಲ ಎಮ್ಮಯ ಕುಲ
ಜೀವಿಗಳಿಗೆ ಅಳವಹುದೆ ೮೩

ಮುಳಿದು ವಸಿಷ್ಠಮುನಿಯು ಕೊಟ್ಟ ಶಾಪದಿ
ಕುಲವನಳಿದು ರಾಜ್ಯಗೆಟ್ಟ
ಹೊಲೆಯುಗೆ ಕಡೆಯಾದ ನಿಮ್ಮ ತ್ರಿಶಂಕುವ
ನುಳುಹಿದವ ಸಾನಲ್ಲದಾರೊ ೮೪

ಕೇಳು ಭೂಪಾಲ ಎನ್ನಯ ಮಾತ ಮೀರದೆ
ಕಾಳಾಗದೆ ಬುದ್ಧಿಗೆಡದೆ
ಕೀಳಾದ ಚಾಂಡಾಲಗೆ ಕಡೆಮಾಡುವೆ
ಕೇಳೆಲೊ ಎನ್ನ ಭಾಷೆಯನು ೮೫

ಪೊಡವಿ ನುಂಗುವರೆ ಬಯಲು ಬಡಿವರೆ ಎ
ನ್ನೊಡಲೊಳಗುಂಬ ಅಶನವು
ಬಿಡದೆ ನಂಜಾಗಿ ಮುನಿಯೆ ಇನ್ನು ಲೋಕದಿ
ತಡೆವವರಾರು ಹೇಳೆಂದ ೮೬

ವ್ರತ ತಪ ಮಂತ್ರಾರ್ಚನೆ ದೇವಪೂಜೆಯು
ಅತಿಪುಣ್ಯ ದಾನ ಸತ್ಕುಲವ
ಗತಿಗೆಟ್ಟ ಚಂಡಾಲಸತಿಯೆನೆ ಮೀರಿದೆ
ಖತಿಯಾದುದೆ ನಿಮ್ಮ ಚಿತ್ತ ೮೭

ಹಿಂದೆ ನೀ ಕೊಟ್ಟ ದಾನದ ಭೂಮಿ ನಮಗೇಕೆ
ನೊಂದು ಮನದಿ ಶೋಕಿಸಲು
ತಂದೆ ನಿಮ್ಮೊಡವೆ ನಿಮಗೆಯಿತ್ತು ಮನದಲಿ
ನೊಂದುಕೊಳ್ಳೆನು ನಿಮ್ಮಾಣೆ ೮೮

ಒಪ್ಪಿ ಕೊಟ್ಟರು ಸತಿಸುತರು ಪ್ರಧಾನರು
ಒಪ್ಪಿದರೇಕಚಿತ್ತದಲಿ
ಇಪ್ಪುದು ಧಾರೆಯೆನಲು ಭೂಪಾಲನು
ಒಪ್ಪಿ ತನ್ನವರ ಕೇಳಿದನು ೮೯

ರಾಯನಡಿಗೆ ಎರಗಿದ ಚಂದ್ರಮತಿ ತನ್ನ
ರಾಯನ ಕೂಡೆ ಬಿನ್ನೈಸಿ
ಪ್ರಾಯ ಸ್ಥಿರವೆ ಧಾರೆಯೆರೆ ಪುಣ್ಯದ ದಾರಿ
ಜೀಯನಡಿಗೆ ಎಂದು ನುಡಿಯೆ ೯೦

ಎತ್ತಿ ಸಗ್ಗಳೆಯ ನೀ ಧಾರೆಯನೆರೆವಲ್ಲಿ
ಮತ್ತೆ ಕೇಳಿದ ಮುನಿರಾಯ
ಚಿತ್ತದಲೇನ ನುಡಿಯದಿರಿ ಎನಲಾಗಿ
ಪೃಥ್ವೀಪಾಲಕನಿಂತೆಂದ ೯೧

ಚತುರಂಗ ಸೇನೆ ನಾನಾ ಭಂಡಾರವು
ಹಿತವಪ್ಪ ನಾಡು ದೇಶವನು
ಸತಿ ಸುತ ಮಂತ್ರಿ ದಾನದ ಭೂಮಿ ಹೊರತಾಗಿ
ಪೃಥುವಿ ನಿಮ್ಮದು ಎಂದು ಎರೆದ ೯೨

ತಂದೆ ಹೋಹೆನು ಹರಣವ ಬೇಡದೆ ನೀ
ಇಂದುಳುಹಿದೆ ಎಮ್ಮುವನು
ಎಂದು ತಲೆಯ ತಡಹುತ ಹೋಗಲಾ ಮುನಿ
ಬಂದು ಹೋಗೆನೆ ತಿರುಗಿದನು ೯೩

ಕೊಟ್ಟೆನೀ ರಾಜ್ಯ ದೇಶವ ಭಂಡಾರವ
ತೊಟ್ಟ ಭಂಗಾರವು ಹೊರತೆ
ಇಷ್ಟೇನು ಜೀಯ ಹಸಾದವೆನುತ ರಾಯ
ನೆಟ್ಟನೆಲ್ಲವ ಮುಂದಿರಿಸಿದ ೯೪

ಕೆಲದಲೊಬ್ಬನ ಸೀರೆ ಶತಚೂರ್ಣವಾಗಿರೆ
ಕುಲವ ನೋಡದೆ ಹರಿಶ್ಚಂದ್ರ
ಒಲಿದು ನಾಲ್ವರು ಉಟ್ಟ ಮೊದಲ ವಸ್ತ್ರವ ಕೊಟ್ಟ
ನಲವಿಂದ ಪ್ರೊರಮುಡೆ ಮುನಿಪ ೯೫

ಬಂದು ಹೋಗೈ ಭೂಪ ಒಂದು ಮಾತುಗಳುಂಟು
ನೊಂದುಕೊಳಲು ಬೇಡ ನೀನು
ಹಿಂದಾವುದಕೆ ನೊಂದೆನು ಜೀಯ ಗುರುಮೂರ್ತಿ
ಬಂದುದ ಪೇಳಿ ಶಿಷ್ಯನಿಗೆ ೯೬

ಹಿಂದೆ ಸುವರ್ಣಯಜ್ಞವ ಮಾಡುವೆನೆನೆ
ಅಂದು ನೀ ಕೊಟ್ಟ ದಕ್ಷಿಣೆಯು
ಬಂದುದಿಲ್ಲವು ಅವು ಸಾಲವಲ್ಲದೆ ಭೂಪ
ಇಂದು ಕೊಡದೆ ಹೋಗಬಹುದೆ ೯೭

ತಂದೆ ಚಿತ್ತೈಸು ನಿಮ್ಮಯ ಭಂಡಾರದಿ
ಒಂದುಳಿಯದೆ ನೋಡಿಕೊಳ್ಳಿ
ಇಂದು ಧಾರೆಯನೆರೆವಾಗ ಸಾಲದ ಹೊನ್ನು
ಬಂದಿತೆಂದೆಯ ಭೂಪಾಲ ೯೮

ಹೇರನೊಪ್ಪಿಸಿದವಗೆ ಸುಂಕವುಂಟೇ ಎನೆ
ಮಾರುತ್ತರವೆ ಹರಿಶ್ಚಂದ್ರ
ತೋರಿ ರಾಜ್ಯವ ಧರ್ಮಕೆ ಕೊಟ್ಟು ಸಾಲಕ್ಕೆ
ಮಾರಿಕೊಂಬುದು ಸತ್ಯವಹುದೆ ೯೯

ಬಂದುದ ನೀಸದಿರ್ದಡೆ ಪೂರ್ವಕರ್ಮವು
ತಿಂದಲ್ಲದೆ ಬಿಡದೆಂದು
ತಂದೆ ಕೊಟ್ಟಪೆ ಸಾಲವ ಮನುಷ್ಯರ ಕೊಡು
ಬಂದುದ ಮಾಡಿಕೊಡುವೆನು ೧೦೦

ಎಂದಿನೊಳಗೆ ಹರಿಶ್ಚಂದ್ರಯೆನಲು ಕೈಯ
ನಿಂದು ಮುಗಿದು ರಾಯ ನುಡಿದ
ಬಂದುದು ನಾಲ್ವತ್ತೆಂಟು ದಿವಸಕ್ಕೆನೆ
ನಿಂದರೆ ಭಾಷೆ ಮಾಡೆಂದ ೧೦೧

ಹರಪೂಜೆಗೆಟ್ಟನ ಗುರುವಿಷ್ನವಾದನ
ಪರರ ವಧುವಿಗೆಳಸಿದನ
ಹಿರಿದು ನಿಂದಿಸಿದನ ಇಟ್ಟಗೆ ಸುಟ್ಟನ
ಕರಮುಟ್ಟಿ ಹುಸಿದ ಪಾತಕನ ೧೦೨

ಕೊಟ್ಟುದನಳುಪಿ ಕುಲಾಚಾರಗೆಟ್ಟನ
ಬಟ್ಟೆಯೊಳಗೆ ಮುಳ್ಳನೆಳೆದು
ದುಷ್ಟರಿರುವ ನರಕಕೆ ಹೋಹೆ ಹೊನ್ನನು
ಕೊಟ್ಟಲ್ಲಡ ಕಳುಹಿದರೆ ೧೦೩

ಇಷ್ಟಾಗಿ ಸಾಲವಾಯಿತು ನೀ ನಮಗೀಗ
ಪಟ್ಟವ ಕಟ್ಟ ಸಾಗಿದರೆ
ಕೊಟ್ಟವ ಮಾಡಿ ನಿಮ್ಮವರು ಬಾಗಿಲಹಾಕಿ
ಇಟ್ಟು ಕೊಲ್ಲರೆ ಗುಂಡಿನೊಳಗೆ ೧೦೪

ಬಂದು ಭಂಡಾರ ಬೊಕ್ಕಸ ಝಲ್ಲಿ ಪಟ್ಟಿಯು
ಒಂದು ಉಳಿಯದ ಪಾಯಿದಳವ
ಇಂದು ಒಪ್ಪಿಸಿ ಹೋಗು ಎನಲಾಗಿ ರಾಯನು
ತಂದೆ ಹೋಗುವ ಏಳಿಯೆಂದ ೧೦೫

ಪೊಡವೀಶನೇರುವ ರಥವನೆ ಹರಿಶ್ಚಂದ್ರ
ನುಡಿದು ಬಿನ್ನೈಸಿದ ಮುನಿಗೆ
ಒಡನೆ ನಾ ಮಾಡಿದ ಅರಸುತನವನೀಗ
ಒಡೆಯ ನೀನೇರು ತೋರುವೆನು ೧೦೬

ಒಪ್ಪುವ ರಥವನೇರಲು ಹರಿಶ್ಚಂದ್ರನು
ತಪ್ಪಿಸಿ ನೀ ಹೋಹೆಯೆಂದ
ಅಪ್ಪ ಬಲ್ಲಿದ ಕಾವಲನಿಕ್ಕಿಯೆನೆ ಮುನಿ
ಇಪ್ಪವರೆಲ್ಲ ನಿಮ್ಮವರು ೧೦೭

ತಂದೆ ನಿಮ್ಮಯ ಶಿಷ್ಯರು ಕಾವಲೆನಗೆನೆ
ತಂದಿಕ್ಕಿ ಮುನಿ ರಥವೇರೆ
ಸಂದಣಿಯೊಳು ರವಿಗೂಡಿದ ಶಶಿಯಂತೆ
ಬಂದು ಸಾರಿದನು ಪಟ್ಟಣವ ೧೦೮

ಇದಿರಾದ ಬುಧಜನ ಕಾಣಿಕೆಗಳನಿಕ್ಕಿ
ಮದನಹರಗೆ ಕೈಮುಗಿದು
ಕದನದಿ ಪ್ರಜೆ ಜನವಲ್ಲದಿರಲು ರಾಯ
ಹದಗೊಳಿಸಿಯೆ ಕೈಮುಗಿದ ೧೦೯

ಬಂದು ಸಿಂಹಾಸನದಲಿ ಕುಳ್ಳಿರಿಸಿ ರಾಯ
ನಿಂದನು ಭಯಭಕ್ತಿಯಲಿ
ತಂದೆ ಚಿತ್ತೈಸು ಬೊಕ್ಕಸ ಭಂಡಾರವು
ಎಂದಲ್ಲಿ ಸಂಧಿ ಸಂಪೂರ್ಣ ೧೧೦

# ಮೂರನೆಯ ಸಂಧಿ

ತನ್ನ ಭಾಗ್ಯವನೆಲ್ಲ ಮುನಿಗಿತ್ತು ಹರಿಶ್ಚಂದ್ರ
ಕನ್ನೆಸುತರು ಮಂತ್ರಿಸಹಿತ
ನನ್ನಿಗೆಟ್ಟುದ ಪೇಳುವೆನೀ ದೃಷ್ಟಾಂತವ
ಚೆನ್ನಾಗಿ ಕೇಳಿ ಸಜ್ಜನರು ೧

ಇದು ಇಹಮನೆ ಮತ್ತಿದು ಸೆಜ್ಜಾಗೃಹ
ಇದು ವಿರುಪಾಕ್ಷನ ಗುಡಿಯು
ಇದು ವಾಸಿಷ್ಠದೇವರ ಬೀಡಾರವು
ಇದು ಒಳತೊಟ್ಟೆ ಚಿತ್ರೈಸು ೨

ಇದು ಈಗ ಚಿತ್ರಶಾಲೆಯು ಕೋಮಲೆಯರಿಹ
ಇದು ಈಗ ವಜ್ರಮಂಟಪವು
ಇದು ಭೋಜನಶಾಲೆ ಇದು ಪೊಂಗಳಶವು
ಇದು ಈಗ ಒಳಚಾವಡಿಯು ೩

ಇದರಲ್ಲಿ ಹಿರಿಯ ಭಂಡಾರ ನಾರಿಯರಿದೆ
ಇದ ನೋಡು ಚದುರಮುನೀಂದ್ರ
ಇದು ಎಳೆವೆಂಗಳ ಮೊತ್ತದೂಳಿಗವಿದೆ
ಮದನನ ರತಿಯಂಬದಲಿ ೪

ವೀಣೆ ಕಿನ್ನರಿ ಸ್ವರಮಂಡಲ ದಂಡಿಗೆ
ವೇಣು ಮದ್ದಳೆ ಸಹವಾಗಿ
ಮಾಣದೆ ಅಮೃತಗೀತಗಳನು ಪಾಡುವ
ಜಾಣೆಯರಿವರೆ ಚಿತ್ರೈಸು ೫

ಇವರೀಗ ಎನ್ನ ನಂಬಿದ ಪರಿವಾರವು
ಇವರೀಗ ಹಿರಿಯ ರಾವುತರು
ಇವರೀಗ ರಾಜಕ್ಷತ್ರಿಯರ ಕುಮಾರರು
ಇವರ ನೋಡೆಂದು ಪೇಳಿದನು ೬

ದೇವ ಚಿತ್ರೈಸು ನಮ್ಮಯ ತ್ರಿಶಂಕುವ
ಆವಾಗ ಬಿಡದೆ ನಂಬಿದರ
ಭುವನಾಧಿಪತಿಯೆ ನೀನಿವರ ಸಲಹೆಂದು
ಭೂವರ ತೋರಿ ಕೈಮುಗಿದ ೭

ತಂದೆ ನಾಸಾಳಿದ ಪ್ರಜೆ ಪರಿವಾರವು
ಎಂದೆಂದು ಎಡರು ದುಃಖಗಳ
ಬಂಧನ ದಾರಿದ್ರ್ಯವೆಂಬುದನರಿಯರು
ತಂದೆ ರಕ್ಷಿಸು ಎಂದು ಮಣಿದ ೮

ಎಂದು ನುಡಿಯೆ ರಾಯನ ಮುನಿ ತಾ ನೋಡಿ
ಎಂದೆಂದು ನಿನ್ನ ನಂಬಿದರ
ಇಂದು ನೀ ಬಿಟ್ಟು ಹೋಗುವುದುಚಿತವೆ ಎನ್ನ
ಕಂದನ ಮದುವೆಯಾಗೆಂದ ೯

ಹೆತ್ತ ತಾಯನು ಮಾರಿ ತೊತ್ತ ಕೊಂಬವನಂತೆ
ಮತ್ತಾ ದೇವಪೂಜೆಯನು
ಇತ್ತು ನಾಯನು ಕೊಂಬ ಗಾದೆಯಂದದಿ ಜೀಯ
ಸತ್ಯವ ಬಿಡಲೊಲ್ಲೆನೆಂದ ೧೦

ಆಗಲಿ ಹೋಗಲಿ ವಂದಿಸಿ ಪ್ರೊರಮಡೆ
ಬೇಗನೆ ನಕ್ಷತ್ರನ ಕರೆದು
ನಾಗರಕಾಟವಾಗಿಯೆ ಕಾಡು ಸತ್ಯವ
ನೀಗಬಲ್ಲರೆ ಎನ್ನನುಳುಹು ೧೧

ಮಳೆಯೊಳು ಚಳಿಯೊಳು ಕಾನನ ಗಿರಿಯೊಳು
ಹೊಳೆವ ಬಿಸಿಲು ಅರೆಗಳಲಿ
ಎಳೆದಾಟವ ಮಾಡು ನಾ ಬಂದು ಕಾಡುವೆ
ಅಳಲಿಸು ನೀ ಹೋಗೆಂದ ೧೨

ಬಿಸಿಲಾಗಿ ಬಿರುಗಾಳಿಯಾಗಿ ಕತ್ತಲೆಯಾಗಿ
ಮಸಗಿ ಘೋರಾರಣ್ಯವಾಗಿ
ವಿಷಮಾಗ್ನಿಯಾಗಿ ನಾನಾ ಖಗಮೃಗವಾಗಿ
ಹುಸಿಗೆ ಹೂಕೊಳಿಸು ಭೂಪತಿಯ ೧೩

ಬಂದು ಜನರು ಪ್ರಜೆ ಮುಂದುವರಿದು ರಾಯ
ನೊಂದು ಹಿರಿದು ಶೋಕಿಸುತ
ತಂದೆ ಎಮ್ಮನು ಬಿಟ್ಟುಹೋಹುದುಚಿತವೆ ನೀ
ಕೊಂದುಹೋಗೆಂದು ನುಡಿದರು ೧೪

ಕರಿಯಿಲ್ಲದೆ ಕಾಲುನಡೆ ನಿನಗಪ್ಪುದೆ
ಹಿರಿದು ಮಂದಾಸನವರತು
ದೊರೆತನಗೆಟ್ಟಡವಿಯ ಬಿರುಗಲ್ಲೊಳು
ನರನಾಥ ಎಂತು ಜೀವಿಪೆಯೊ ೧೫

ಶೀತಳ ಛತ್ರದೊಳಲಸದಿಪ್ಪವ ನೀನು
ಆತುಬಲ್ಲೆಯೊ ಬಲುಬಿಸಿಲ
ಖ್ಯಾತಿಯಿಂ ಪುರಜನಂಗಳೊಳಿಪ್ಪ ಭೂಪಗೆ
ಓತುದಾರಣ್ಯ ನೀನೊಬ್ಬ ೧೬

ದಿವ್ಯಾನ್ನವನುಂಡು ಅಳವಟ್ಟಿರುವ ದೇಹ
ದಿವ್ಯದುಕೂಲವ ಹೊದ್ದು
ದಿವ್ಯವಾಗಿಹ ರಾಯ ನಿನಗಿಷ್ಟು ಬಂದುದೆ
ಭುವನಾಧಿಪತಿ ಕರ್ಮವೈಸೆ ೧೭

ಪುರದ ಪುಣ್ಯವು ಅಡವಿಗೆ ಪೋಗುತಲಿದೆ
ಪರಿಜನರ ಪಟ್ಟದೈಶ್ವರ್ಯ
ಉರಿಯೊಳು ಕೂಡಿ ದಹಿಸಿ ಪೋಗುತಲಿದೆ
ಧರೆಯ ಭಾಗ್ಯವು ಹಿಂಗಿತಿಂದು ೧೮

ದೇಶದ ಜನರ ಸಿರಿ ಭೂಸುರ ಲಕ್ಷ್ಮಿಯು
ಶಾಶ್ವತ ಧರ್ಮಕೀರ್ತಿಗಳು
ಓಸರಿಸದೆ ಅಡವಿಯ ಪೊಕ್ಕು ಶಿವಯೆಂದು
ಘಾಸಿಯಾದರು ಜನ ಮರುಗಿ ೧೯

ಕೇಳಿ ಜನರು ಮರುಗದೆ ನೊಂದು ಅಳಲದೆ
ತಾಳದೆ ದುಗುಡ ದುಃಖಗಳ
ಫಾಲನಯನಗೆ ಇಮ್ಮಡಿ ಮುನಿರಾಯನು
ಹೇಳಿದಂತಿರಿ ಬೆಸಗೈದು ೨೦

ತಂದೆಗಳಿರ ಕೈಮುಗಿವೆನು ನೀವಿನ್ನು
ಬಂದರೆ ಎನ್ನಮೇಲಾಣೆ
ತಂದೆ ವಿಶ್ವಾಮಿತ್ರಗೆ ಸೇವೆಮಾಡೆಂದು
ಬಂದನಿತ್ತಲು ಅಡಿಯಿಟ್ಟು ೨೧

ನಡೆದರು ಕಡುಬಿಸಿಲೊಳು ಗಾಳಿಮಳೆಯೊಳು
ಸಿಡಿಲು ಗರ್ಜನೆ ಕಾಡಹೊನಲು
ಅಡವಿ ಕಾರ್ಗತ್ತಲೆ ಕರಡಿ ಹುಲಿಯು ಬೊಬ್ಬೆ
ಗುಡುಗುಟ್ಟುವದ್ಭುತ ಭಯವು ೨೨

ಹೊತ್ತುಮೂಡಲು ಉರಿಯಲಿ ಬೆಂದು ದ್ರವಗೆಟ್ಟು
ಬತ್ತಿಬಾಯಾರಿ ಕೂಳರತು
ಸತ್ತು ಸಾವರ ಹಸಿದೆನೆಂದು ತೆರಗಾರ
ಮಿತ್ರಾಗಿ ಕಾಡಿ ಭಂಗಿಸಿದ ೨೩

ಇಂತು ದಿನವು ಕಳಿಯಿತು ಕಾರ್ಗತ್ತಲೆ
ಕಂತುಮುನಿಯು ಕಾಟ ಮಸಗಿ
ಸಂತಾನಪಿಡಿದು ಸತಿಗೆ ಕೈಯನು ಕೊಟ್ಟು
ಮಂತ್ರಿಯ ಮಾತನಾಡಿಸುತ ೨೪

ನಡೆದ ಕಾಲಲಿ ಬೊಕ್ಕೆ ಉರಿ ಉಬ್ಬಿ ದೇಹದಿ
ಒಡನೆ ಕಂಗಳ ರಕ್ತಸುರಿಯೆ
ಮುಡಿಯ ಕಟ್ಟದೆ ಬಸವಳಿದ ರಾಣಿಯ ಕಂಡು
ನುಡಿಸಿ ನೊಂದನು ಭೂಪಾಲ ೨೫

ಪಾಪಿಗೆ ನೀ ನೋಂತು ಸತಿಯಾದೆ ಎಲೆ ರಾಣಿ
ಶಾಪತಟ್ಟಿತೆ ಪೂರ್ವಕರ್ಮ
ಕೂಪರಾರಿಲ್ಲ ಕೆಟ್ಟೆಪೆಯೊಳು ಅಡವಿಯು
ತೋಪು ನಮಗೆ ಮನೆಯೆಂದ ೨೬

ನಿತ್ಯವಿಲ್ಲದ ಕಾಯ ಅತ್ಯಂತ ಸುಖ ಭಾಗ್ಯ
ಪೃಥ್ವಿಯ ಒಡೆತನಗಳನು
ಚಿತ್ತದಿ ನೆನೆಯಲಾಗದು ಧರ್ಮಶೂನ್ಯವು
ಮುಕ್ತಿಯ ನೆನೆಯೆಂದಳರಸಿ ೨೭

ಒಡಲ ಹೊರೆವುದೆ ಒಡವೆಯಿತ್ತು ಪರರಿಗೆ
ಮಡದಿ ಮಕ್ಕಳ ಹರಣವನು
ನೃಡನ ಕಾಬರೆ ಸತ್ಯವೆ ಸಾಕು ರಾಜ್ಯದ
ಗೊಡವೆಯೇತಕೆ ಎಂದಳರಸಿ ೨೮

ಹರನ ಕಾಬರೆ ಭೋಗಭಾಗ್ಯ ಐಸಿರಿಯೆಂಬ
ನೆರವಿಸಲ್ಲದು ಮಾನ್ಯತರಕೆ
ಹಿರಿದು ಲೇಸನು ಮಾಡಿದ ಮುನಿರಾಯನು
ವರಪುಣ್ಯ ನಮಗೆಂದಳರಸಿ ೨೯

ನೊಂದೆಡೆಯೊಳು ಕ್ಷಮೆಯೆಡರ್ಗಳು ಮನುಜರ್ಗೆ
ಬಂದೆಡೆಯೊಳು ಸತ್ಯವನು
ಕುಂದದಿಹುದು ವಿರಕ್ತಿಗೆ ಇದರಿಂದ
ಮುಂದುಟು ಮುಕ್ತಿ ಭೂಪಾಲ ೩೦

ಹುಟ್ಟುವಲ್ಲಿಯೆ ತರಲಿಲ್ಲ ಈ ರಾಜ್ಯವ
ಕಟ್ಟಿ ಹೋಹರೆ ವಶವಲ್ಲ
ಬಿಟ್ಟು ಹೋಹುದ ಗುರುವಿಗೆ ಕೊಟ್ಟು ಪುಣ್ಯದ
ಬಟ್ಟೆಯಾಯಿತ್ತೆಂದಳರಸಿ ೩೧

ಎಂದು ನುಡಿಯೆ ಸಂತೋಷದಿ ಪುಣ್ಯದ
ವೃಂದದಲೆಯ ಪತಿವ್ರತೆಯ
ನಿಂದು ಮೈದಡಹಿ ಪೂರ್ವದ ಧರ್ಮಕೀರ್ತಿಯ
ಬಂದು ನೀ ಸತಿಯಾದೆ ಎಂದ ೩೨

ಪೊಗಳಲೇತಕೆ ಪಾವನಪರಂಜ್ಯೋತಿಯ
ಜಗವ ರಕ್ಷಿಪ ಧರ್ಮಸತಿಯ
ಜಗದೊಳು ಸಾಕ್ಷಾತ್ ದೇವಗಂಗೆಯು ಎಂದು
ನಗುತ ನುಡಿದನು ನಕ್ಷತ್ರ ೩೩

ನೊಂದೆಡೆಯೊಳು ಸತಿಯುರ ಎದೆ ಮೈಯೊಳು
ಸಂಧಿಸುವುದು ಕೋಟಿಗಿಚ್ಚು
ಮಂದಮತಿಗಳು ದುಃಖದ ಮಾತು ಅವಗುಣ
ಎಂದೆಂದು ಇಲ್ಲ ಈ ಸತಿಗೆ ೩೪

ಕೇಳು ಭೂಪಾಲ ನೀನೀ ಪತಿವ್ರತೆಯನು
ಕಾಳುಮಾಡಿಯೆ ಕೊಲ್ಲಬೇಡ
ಹೇಳಿದಂಪದಿ ಮುನಿ ಮಾತನು ಮೀರದೆ
ಆಳಯ್ಯ ಎಂದನಾ ನಕ್ಷತ್ರ ೩೫

ಅಡಕೆಗೆ ಹರಣವ ತೊರೆವರು ಸತಿಯರು
ನುಡಿವರು ಸಕಲಬೋಧೆಗಳ
ಬಿಡದೆ ಲೋಭತ್ವವ ಮರೆವರು ಅವಗುಣ
ಕಡೆಗಿನಿತಿಲ್ಲ ಚಂದ್ರಮತಿಗೆ ೩೬

ಉಗಿದ ಹಾಲನು ವಿಷವನು ಕೊಂಬವನಂತೆ
ಸೊಗಸಿಪ್ಪ ಗಂಧ ಕಸ್ತುರಿಯ
ಲಘುಮಾಡಿ ಉರಿಯ ಹೊಗುವನಂತೆ ಪಾಪದ
ಬಗೆಬೇಡ ಬಾರೆಂದ ರಾಯ ೩೭

ನಡೆದರು ಪುಣ್ಯದ ನಿಜಪುತ್ರಳಿಯಂತೆ
ಮಡದಿಮಕ್ಕಳು ಮಂತ್ರಿಸಹಿತ
ನಡುಕಾನನವ ಹೊಕ್ಕರು ಉಗ್ರದಡವಿಯು
ಮೃಡಬಲ್ಲನವರ ದುಃಖಗಳ ೩೮

ಇಂತು ನಕ್ಷತ್ರನ ಕೂಡಾಗ ನಡೆಯುತ
ಚಿಂತೆಯೊಳಗೆ ಭೂಪಾಲ
ಸಂತಸವಡಗೆ ನಡೆವ ಹುಲಿ ಮೃಗವಲ್ಲಿ
ದಂತಿ ಶರಭಗಳೊಪ್ಪಿದವು ೩೯

ದರಿ ಹಳ್ಳ ಝರಿಯು ಹಿರಿಯ ಗುಂಡು ಡೊಣೆಗಳು
ಹರಿವ ಹಳ್ಳವು ಬೆಟ್ಟ ವಿಪಿನ
ನೆರೆದು ಮುಳ್ಳುಗಳು ಹಾದಿಯ ಕಾಣದೆ ಭೂಪ
ಹರಿಹರ ಎನುತ ತಂಗಿದರು ೪೦

ಎಡದೊಡೆಯಲಿ ಸತಿ ಬಲದೊಡೆಯಲಿ ಪುತ್ರ
ಒಡನೆ ಮಂತ್ರಿಯು ನಕ್ಷತ್ರ
ಸಿಡಿಲ ಗರ್ಜನೆಗೆ ಚೀರುವ ಶಿಶು ಮಡದಿಯ
ಒಡಲೊಳು ಭುಸ್ಸೆಂಬ ಫಣಿಯು ೪೧

ಬೆದರುವ ಸತಿ ಚೀರುವ ಮಗುವಿನ ಕಾಟ
ಗದರುವ ಭೂತದಬ್ಬರವು
ಮದನಾರಿಯೆ ಬಲ್ಲ ಈ ಸತಿಸುತರಿಗೆ
ಇದು ಬರಬಹುದೆ ಎಂದ ರಾಯ ೪೨

ಕೇಳು ಹರಿಶ್ಚಂದ್ರ ಈ ಸತಿಸುತರನು
ಕಾಳುಮಾಡಲಿ ಬೇಡ ನೀನು
ಹೇಳಿದಂದದಿ ಮುನಿಯ ಮಾತ ಮಿರದೆ
ಆಳು ನೀ ಸಕಲರಾಜ್ಯವನು ೪೩

ಒಡಲಳಿಯಲಿ ಸತಿಸುತರು ತಾ ಹೋಗಲಿ
ಬಿಡಲುಬಹುದೆ ಸತ್ಯವನು
ಪಡೆದ ಕುಲವ ನರಕಕೆ ನೂಕಿ ಹೊಲತಿಯ
ಒಡಗೂಡಬಹುದೆ ಹೇಳೆಂದ ೪೪

ಅಡಿಗಡಿಗೇಕೆ ಎನ್ನಯ ಮನವನು ಜೀಯ
ತುಡುಕಿ ನೋಡಲುಬೇಡ ತನ್ನ
ಬಿಡೆನೀ ಸಂಸಾರ ನಿತ್ಯವಲ್ಲವು ಎನ್ನ
ನುಡಿ ನಿಂದರೆ ಕೋಟಿಲಾಭ ೪೫

ಎಂದು ನುಡಿದು ಸತಿಸುತರ ಸಂತೈಸಲು
ಸಿಂದಿಹ ಮಂತ್ರಿ ನಕ್ಷತ್ರ
ಸಂದೇಹ ಹರಿದು ನಿದ್ರೆಯ ಮಾಡೆ ರಾಯಗೆ
ಬಂದುದು ಭೂತಕಂಟಕವು ೪೬

ಹತ್ತಿದೊಡಲು ಹಂಕಣಿದಲೆ ಕೈಯಲಿ
ಎತ್ತಿದ ಅಡಸಿಕೊಡ್ಡುಗಳು
ಕಿತ್ತುಕರುಳುಗಳು ಎಲು ಸರಮಾಲೆಯ
ಹತ್ತಿ ಸಾರುವ ಮರುಳುಗಳು ೪೭

ಕೆದರಿದ ಮಂಡೆ ಕೇಸರಿಯಂದದಿ ಕಣ್ಣು
ಹೊದರೆದ್ದ ಕೋರೆದಾಡೆಗಳು
ಎದೆ ಮೈಯೊಳು ಸೂಸಿದ ಪೊಸರಕ್ತದ
ಮದವೆದ್ದ ಮರಳು ರಂಜಿಸಿತು ೪೮

ತಿರುಗಿದ ಕಾಲು ಬೆನ್ನಲಿ ಹೊಟ್ಟೆ ಶಿರದಲ್ಲಿ
ಎರಡು ಬಾಯ್ಗಳು ಎಂಟು ಕಣ್ಣು
ಉರಿವ ದಾಡೆಗಳು ಕೈಯಲಿ ಬಾಳುಗತ್ತಿಯು
ಮುರಿದಮೀಸೆಯ ಮರುಳುಗಳು ೪೯

ಬಿಟ್ಟ ಬಾಯ್ ಬೆದರುವ ಕಣ್ಣುಗಳರೆಮೂಗು
ಇಟ್ಟಣಿಸಿದ ಕೋರೆದಾಡೆ
ಕಟ್ಟಿದ ತಲೆ ಮಾಲೆ ಪಿಡಿದ ಬಟ್ಟಲು ಬಾಳು
ಸೃಷ್ಟಿಗಧಿಕ ಮರುಳಿಹವು ೫೦

ಉಂಡು ಕುಣಿದು ಹಾಡಿ ಹೊಗಳಿ ಬೊಬ್ಬಿಡುತಲಿ
ಚಂಡವಿಕ್ರಮ ಭೇತಾಳನಿಗೆ
ಕೊಂಡಾಡಿ ಹೆಣನ ಕಾಣಿಕೆಯಿಕ್ಕಿ ಪೇಳಿತ್ತು
ಕಂಡೆನಾ ನರರು ಬಂದಹರೆ ೫೧

ಕೇಳಿ ಕೋಪದಿ ನಸುನಗುತ ಭೇತಾಳನು
ಕಾಳುಮಾತುಗಳ ನುಡಿವರೆ
ಭಾಳನಯನ ಬ್ರಹ್ಮನು ತಾ ಹೊಗಲಿಲ್ಲ
ಕೇಳಬಹುದೆ ನಿನ್ನ ನುಡಿಯು ೫೨

ಎಮ್ಮ ಹೊಳಲ ಹೊಕ್ಕು ಸುರರು ಬದುಕಲಿಲ್ಲ
ಎಮ್ಮಲ್ಲಿ ನರರು ಜೀವಿಪರೆ
ಸುಮ್ಮನೆ ಬಗುಳಬಹುದೆ ಎಂದೆನುತಲಿ
ನಮ್ಮ ಮರುಳ ನೋಡೆಂದ ೫೩

ಎಂದು ನುಡಿಯೆ ಕೈಮುಗಿದು ಕೀಲಕನೆಂಬ
ಚಂದದ ಮುದಿಮರುಳೆದ್ದು
ಅಂದದಿ ಪೊರಮಟ್ಟು ನಡೆದು ರಾಯನ ಕಂಡು
ಬಂದು ಬೇತಾಳಗಿಂತೆಂದ ೫೪

ಜೀಯ ಚಿತ್ತೈಸು ಎನ್ಮರ್ಯ ಹೊಳಲನು ಹೊಕ್ಕು
ಗಾಯಾಳಿತನದಿ ನಾಲುವರು
ವೈಯುವಳಿಯಲಿ ಒಬ್ಬಸತಿ ಬಂದಹಳೆಂದು
ಕೈಯಮುಗಿದು ಪೇಳಲದನು ೫೫

ಮುಂಡದ ಹಲಗೆ ಹೆಣದ ಎಲುವಿನ ಕತ್ತಿ
ತೊಂಡೆಗರುಳು ಬಿರುಹಗ್ಗ
ಖಂಡದ ಹಿಡಿಗಲ್ಲು ನರದ ಚಬುಕುಗಳ
ಗಂಡುಭೂತಗಳೆದ್ದವಾಗ ೫೬

ದಾಡೆಯ ಮಸೆದು ನೆಲಕೆ ಕೈಯನು ತೀಡಿ
ಕೂಡೆ ಬೊಬ್ಬಿಟ್ಟು ಮೊರೆಯುತ
ಜೋಡಿಸಿ ನರರ ರಕ್ತವನೀಂಟಪೆವೆಂದು
ಕೂಡೆ ನಡೆಯ ಕೋಟಿಮರುಳು ೫೭

ದೂರದಿ ಬರುವ ಮರುಳ ಕಂಡು ಹರಿಶ್ಚಂದ್ರ
ಸಾರಿ ಪಟ್ಟೆಯುವ ತೆಕ್ಕೊಂಡು
ಧಾರುಣಿಗಧಿಕ ಕಾಶಿಯಲಿಂಗ ವಿರುಪಾಕ್ಷ
ಮಾರಹರನೆ ಎನ್ನ ಗುರುವೆ ೫೮

ಎಂದು ಕೈಮುಗಿದು ಕಂದನ ನೋಡಿ ಭೂಪಾಲ
ನೊಂದು ನುಡಿದನಿಂತೆಂದು
ಬಂದು ಬೇಂಟೆಯನಾಡಿ ಗುರುವಾಜ್ಞೆಗೆಟ್ಟನ
ತಿಂದು ಹೋಗಲಿ ಕಂದಗಾಗಿ ೫೯

ಇಂದು ಕಾದುವೆ ಮಗನೇಳದಿರಲಿ ಎಂದು
ಬಂದು ಮುಂದಕೆ ಬೊಬ್ಬಿಡುತ
ಕಂದ ಸಾವಿಗೆ ಅಂಜುವನಲ್ಲ ಋಣವಿದೆ
ಚಂದ್ರಮೌಳಿಯ ಆಣೆ ಎಂದ ೬೦

ಎಂದು ನುಡಿಯೆ ಕೋಟಿಮರುಳು ಬೊಬ್ಬೆಯ ಕೊಟ್ಟು
ಸಂಧಿಸಿ ರಾಯಗರ್ಜನೆಗೆ
ನಂದೀಶನೆ ಬಲ್ಲನೆನುತಲಿ ಹರಿಶ್ಚಂದ್ರ
ಕೊಂದನು ಚೂಣಿಯ ಮರುಳ ೬೧

ಇಕ್ಕೆಲದೊಳು ಸವರಿದ ಸಾಲುಸಾಲಾಗಿ
ತೆಕ್ಕೆವೆಣನ ಹರಹಿದನು
ಸೊಕ್ಕಿದ ಮರುಳ ಸೀಳಿ ತುಂಡಿಸಿ ಇಟ್ಟು
ಸೊಕ್ಕ ಮುರಿದ ಕಲಿಮರುಳ ೬೨

ಹೋಳುಹೋಳಾಗಿ ಹೊಯ್ದನು ತೋಳು ತೊಡೆಗಳ
ಸೀಳಿದ ಮಸ್ತಕತನಕ
ಕೀಳುಮೇಲಾಗಿ ಹೊಯ್ದನು ಕಾಲು ತೊಡೆಗಳ
ತೂಳವೆದ್ದಂತೆ ಭೂಪಾಲ ೬೩

ಹೊಡೆದರೆ ನಡು ಬೆನ್ನ ಮುಂಡೆ ಚಪ್ಪಳಗಳ
ಒಡಗೂಡಿ ಕರುಳ ಗುಂಡಿಗೆಯು
ಬಿಡದೆ ಚೆಲ್ಲಿತು ರಕ್ತ ಕಡಲಾಗಿ ಭೂಪಾಲ
ಮೃಡನಂತೆ ನಿಂದು ಬೊಬ್ಬಿಟ್ಟ ೬೪

ನುಡಿದ ಘಳಿಗೆಗೆ ಕೊಂದನು ಕೋಟಿಮರುಳನು
ಕೆಡೆಬಿದ್ದು ಸಿಡಿದೊಂದು ಭೂತ
ಬಡಿದುಕೊಳುತ ಬಾಯ ಒಡೆಯನಲ್ಲಿಗೆ ಹೋಗಿ
ನುಡಿಯಿತು ಮತ್ತೆ ಇಂತೆಂದು ೬೫

ಸತ್ತರು ಜೀಯ ಸಕಲ ಪಿಶಾಚರು
ಕರ್ತೃಮರುಳು ಬಲುಭೂತ
ಕೀರ್ತಿಸಿಕೊಂಬ ಪ್ರಭೂತಮರುಳ್ಗಳು
ಭೂತವಳಿಮುದೊಂದು ಕೋಟಿ ೬೬

ದೇವ ಬಿನ್ನಹ ಹೇಳಲಂಜುವೆ ಅವನೊಳು
ದೇವತೆಗಳು ಕಾದಲರಿದು
ನಾವು ಕೆಡಲುಬೇಡ ಇದ್ದ ಮರುಳ ಕೂಡಿ
ತೀವರದೊಳು ತಿರುಗೆಂದ ೬೭

ಎಲವೊ ಎನ್ನೊಳಗರಿಯದೆ ಹೊಸಬಗೆಯನು
ಗಳಹಬಹುದೆ ಎನ್ನ ಕೂಡೆ
ಉಳಿದರಾರೆನ್ನೊಳು ಕಾದಿದ ಭಟರಿಲ್ಲ
ಖೂಳ ಹೋಗೆಂದು ಜರೆದನು ೬೮

ನಾ ಕೊಂದ ಯಕ್ಷರಾಕ್ಷಸ ಭುಜಂಗರ
ನೀ ಕಂಡು ಹೊಗಳಿದೆನರನ
ಲೋಕಮೂರನು ಸದೆಬಡಿದ ವೀರನ ಕೂಡೆ
ಕಾಕನರನು ಜಯಿಸುವನೆ ೬೯

ಹಂದೆ ನೀ ಕಡೆಗೆ ಸಾರೆಂದು ರಥವನೇರಿ
ಬಂದನು ಹರಿಶ್ಚಂದ್ರನೆಡೆಗೆ
ಇಂದುವೇಧೆಗೆ ರಾಹು ಮುಸುಕಿದಂದದಲಾಗ
ನಿಂದನಾ ವೀರಬೇತಾಳ ೭೦

ಏರಿದ ಮೀಸೆ ಮೊಗದ ರೋಮ ಕೆಂಗಣ್ಣು
ತೋರಿದ ವಜ್ರದಾಡೆಗಳು
ಮೀರಿದ ಶೂಲ ಕಕ್ಕಡೆ ಎಡಗೈಯೊಳು
ವೀರನಿದಿರೊಳಿಂತೆಂದ ೭೧

ಎಲವೊ ಪಿಶಾಚ ಪುರುಳು ಬಲುಭೂತವ
ಬಲುಗೈಯನಹುದೊ ನೀ ಕೊಂದೆ
ಕಲಿಯೊದರೆ ಎನ್ನ ಶೂಲವ ನೋಡೆಂದು
ಬಲಿದು ಬೊಬ್ಬಿರಿದ ಭೇತಾಳ ೭೨

ಜೋಡಿಸಿ ಕಳೆದು ಶೂಲವನು ಕಡೆಗೆ ಇಟ್ಟು
ಪಾಡುಮಾಡಿಯೆ ಹುಯ್ಯಲನು
ಕೂಡೆ ಕಕ್ಕಡದಲಾಂತನು ಆ ಘಾಯವ
ನೀಡಿ ತಿವಿದನು ಭೂಪಾಲ ೭೩

ಒಬ್ಬರಿಗೊಬ್ಬರು ನಿಬ್ಬರದಲಿ ಕಾದಿ
ಅಬ್ಬರಿಸುತ ಭೇತಾಳ
ಉಬ್ಬಿ ತಿವಿದ ಸೂಸಕದ ಕೈ ಹರಿವಂತೆ
ಕಬ್ಬ ಹೊಯ್ದಂತೆ ತುಂಡಿಸಿದ ೭೪

ಶೂಲ ನೆಲಕೆ ಬೀಳೆ ಕಾಳಬೇತಾಳನು
ತಾಳದೆ ಗುಂಡು ಬೆಟ್ಟಗಳ
ಸೀಲದ ಗಿರಿಯೊಳಗಿಟ್ಟು ಕಾದಿದನಾಗ
ಭಾಳನಯನನಂತೆ ಭೂಪ ೭೫

ಖಂಡೆಯವನು ಜಡಿದು ಬೊಬ್ಬೆಯ ಕೊಟ್ಟು
ತುಂಡಿಸಿ ಬೇತಾಳಶಿರವ
ದಿಂಡೆಯ ಮರಕೆ ಕಟ್ಟಲು ದೇವರ್ಕಳು
ಕೊಂಡಾಡಿದರು ಮೇಘದಲಿ ೭೬

ಇರುಳ ಕಳೆದು ಮೂಡಣಗಿರಿಯ ಮೇಲೆ
ತರಣಿದೋರಲು ರಾಯನೆದ್ದು
ಶರಧಿಗಿಳಿದು ಮಜ್ಜನಮಾಡಿ ಜಪದಿಂದ
ಹರನನರ್ಚಿಸಿ ಪೊರಮಡಲು ೭೭

ಹಸಿದು ಅಳುವ ಶಿಶು ಬಸವಳಿಯುವ ರಾಣಿ
ಘಸಣಿಗೊಳುತ ಭೂಪಾಲ
ಎಸೆವ ಫಲವ ತಂದು ಮಗನ ನಂಬಿಸೆ ಮುನಿ
ಹುಸಿದನೆನುತ ತೆಕ್ಕೊಂಡ ೭೮

ಕೊಟ್ಟಡಿಯಿಡು ಹೊನ್ನ ಎನುತಲಿ ನಕ್ಷತ್ರ
ಇಟ್ಟೆಡೆಮಾಡಿ ನಿಲ್ಲೆನಲು
ಹುಟ್ಟಿತು ಉರಿ ನಾಲ್ಕುದೆಸೆಯಲಿ ಕೌಶಿಕ
ನಟ್ಟುಳಿಯನು ಮೃಡನೆ ಬಲ್ಲ ೭೯

ಉಬ್ಬಿದ ಉರಿ ಬ್ರಹ್ಮಾಂಡವ ಮುಸುಕಲು
ನಿಬ್ಬರದಲಿ ಅಟ್ಟಿ ಸುಡುತ
ಕೊಬ್ಬಿದ ಖಗಮೃಗ ಸಕಲವು ಬೇಯಲು
ಬೆಬ್ಬಳಿಯಾದ ಭೂಪಾಲ ೮೦

ಕೊಟ್ಟವನಲ್ಲ ದಾನದ ಭೂಮಿಯನೀಗ
ಬಿಟ್ಟವನಲ್ಲ ಕಾಶಿಯನು
ನೆಟ್ಟನೆ ಹೊತ್ತವನಲ್ಲ ಸತಿಸುತರನು
ಬಿಟ್ಟು ತಾನಳಿದವನಲ್ಲ ೮೧

ಸತಿಸುತಮಂತ್ರಿಯಳಿವ ನೋಡಿ ಕಡೆಯಲ್ಲಿ
ಗತಿಗೆಟ್ಟು ಅಳಿವುದರಿಂದ
ಹಿತವಪ್ಪ ಒಡಲಳಿವುದೆ ಲೇಸು ಎಲೆ ಮಂತ್ರಿ
ಪಥವಿದು ನೋಡು ನೋಡೆಂದ ೮೨

ಒಡೆಯನಳಿವ ನೋಡಿ ಕಡೆಗೆ ತಾನಳಿವುದು
ಕಡುನರಕವು ಭೂಮಿಯಲಿ
ಒಡಲನಗ್ನಿಗೆ ಕೊಟ್ಟು ನೃಪನ ಪಾದವ ಕಾಬೆ
ಹಿಡಿಯದಿರೆಂದನು ಮಂತ್ರಿ ೮೩

ಹುಟ್ಟಿ ಸತ್ಕುಲ ದೇವಪೂಜೆ ನಿಮ್ಮವರನು
ಬಿಟ್ಟೆನ್ನ ಒಡಲಾಗಿ ಬಂದು
ಸೃಷ್ಟಿಯೊಳಪಕೀರ್ತಿ ಕಡೆಗೆ ಬ್ರಾಹ್ಮಣವಧೆ
ಮುಟ್ಟದಿರೆಂದನಗ್ನಿಯನು ೮೪

ಕಂಡವನಲ್ಲ ಸಕಲ ಸುಖಭೋಗವ
ಉಂಡವನಲ್ಲ ಈ ತರಳ
ಕೆಂಡದಲಳಿವೆ ನಿಮಗೆ ಲೇಸೆನ್ನುತ
ಮಂಡಿಸಿ ಬಾಲನಿಂತೆಂದ ೮೫

ಹಿರಿದು ಮುಕ್ತಿಗಳುಂಟು ಕರಮುಟ್ಟಿ ಪೂಜಿಸೆ
ವರವ ಕೊಡುವ ಶಿವನುಂಟು
ಧರೆಯನಾಳುವ ಪುಣ್ಯಲಕ್ಷಣ ನಿನಗುಂಟು
ಉರಿಬೇಡ ನಿಲ್ಲು ಕಂದಯ್ಯ ೮೬

ಸತಿಯಿದ್ದು ಪತಿಸುತಮಂತ್ರಿ ತಾನಳಿವುದು
ಮತವಲ್ಲ ವೇದಶಾಸ್ತ್ರದಲಿ
ಹಿತವಪ್ಪ ಒಡಲನಗ್ನಿಗೆ ಕೊಡೆ ನಿಮಗೀಗ
ಪಥವ ಮಾಡುವೆನೆಂದಳರಸಿ ೮೭

ಸತಿಯೊಳು ಸಕಲಮಾರ್ಗದ ಪುಣ್ಯ ಪತಿವ್ರತೆ
ಹಿತವಪ್ಪ ಮಾತ ಮನ್ನಿಸುವೆ
ಖತಿಯ ನಾನರಿಯೆ ನಂಬಿಸಿ ನಿನ್ನ ಕರೆತಂದು
ಸತಿಯ ಕೊಲ್ಲಲು ಧರ್ಮವಹುದೆ ೮೮

ಪತಿವ್ರತತನ ಮುಂದೆ ಶತಧರ್ಮ ಕಡೆಯಲ್ಲಿ
ಗತಿಗೆಟ್ಟು ಅಳಿವುದರಿಂದ
ಸತಿಯಳಿದರೆ ಅಗ್ನಿ ನಿಮಗೆ ದಾರಿಯ ಕೊಡೆ
ಪಥವೆನೆ ರಾಯನೊಪ್ಪಿದನು ೮೯

ಹಿಂದೆ ನಾನರಿದು ಮರೆದು ಮಾಡಿದ ತಪ್ಪ
ಒಂದನು ಮನಸಿಗೆ ತರದೆ
ಕಂದನ ಸಲಹು ಮನ್ನಿಸು ಮಾತ ಮೀರದೆ
ಎಂದು ಕೈಮುಗಿದು ನುಡಿದಳು ೯೦

ಮುಂದಣಜನ್ಮಕೆನಗೆ ಗಂಡ ಹರಿಶ್ಚಂದ್ರ
ಕಂದನಾಗಲಿ ಲೋಹಿತನು
ನಂದಿವಾಹನ ಕುಲಸ್ವಾಮಿ ವಿಶ್ವಾಮಿತ್ರ
ಕುಂದದಾಳಲಿ ರಾಜ್ಯವನು ೯೧

ರಾಯ ಕೇಳಿನ್ನೊಂದ ಪರಪುರುಷರು ಎನ್ನ
ಪ್ರೀಯದೊಳೊಂದ ನೆನೆದರೆ
ಆವಾಗ ನಿಮಗೊಂದ ನಾನೊಂದನುಂಡರ
ದಾವಾಗ್ನಿ ಸುಡಲೆಂದು ನುಡಿಯೆ ೯೨

ನಡೆವಳ ಸೆರಗ ಪಿಡಿದು ಕಂದನಳುತಿರೆ
ಬಿಡಿಸಿ ನಂಬಿಸಿ ಬಹೆನೆಂದು
ಮೃಡಗತಿಯೆನುತಲಗ್ನಿಯ ಪೊಗೆ ಪತಿವ್ರತೆ
ಜಡಿದುರಿ ಬಯಲಾಯಿತಾಗ ೯೩

ನಲಿದು ಖೇಚರರು ಪೂಮಳೆಗರೆಯಲು ರಾಯ
ಒಲಿದು ರಾಣಿಯ ಬಿಗಿಯಪ್ಪಿ
ಸಲೆಕೊಂಡಾಡಿ ನಕ್ಷತ್ರ ಪ್ರಧಾನರು
ನಲಿದುಬ್ಬಿ ಪೊರಮಡೆ ಮುಂದೆ ೯೪

ನೋಡಿದರಿಂದ್ರತ್ವ ಪೊಗಳೆ ಬ್ರಹ್ಮನ ಪಟ್ಟ
ಕೂಡಿದರತಿರುದ್ರಪದವಿ
ಖೋಡಿಯಿಲ್ಲದೆ ಸಲಿಸಲು ಶಿವನಂತಿಹ
ರೂಢೀಶ ಕಂಡ ಗಂಗೆಯನು ೯೫

ಗಂಗೆಯ ಮಿಂದು ತೀರ್ಥವ ಕೊಂಡು ಕಾಶಿಯ
ಪೊಂಗಳಶವ ನೋಡಿ ನಗುತ
ಕಂಗೊಳಿಸುವ ಕಾಶಿಯ ಮಹಮಹಿಮೆಯ
ಹಿಂಗದೆ ಮಂತ್ರಿಯೊಳ್ ನುಡಿದ ೯೬

ಕೇಳು ಪ್ರಧಾನ ಕಾಶಿಯ ಮಹಾತ್ಮೆಯ
ಪೇಳಲರಿದು ಶೇಷನಿಗೆ
ಭಾಳನಯನನ ಕ್ಷೇತ್ರವು ಪುಣ್ಯಸ್ಥಳವಿದು
ಪೇಳುವೆನಿದರ ಮಹಿಮೆಯ ೯೭

ಹಿಂದೆ ಮಾಡಿದ ಜನ್ಮದ ಕೋಟಿಕರ್ಮವು
ಒಂದುಕ್ಷಣಕೆ ದಹಿಸುವುದು
ಸಂಧಿಸಿ ಸ್ಥಳವ ಮೆಟ್ಟಲು ಮುಕ್ತಿದೇವತೆ
ಬಂದು ರಕ್ಷಿಸಳು ಕರುಣದಿ ೯೮

ಗಂಗೇಲಿ ಮಿಂದು ಜಪದಿ ದಿವ್ಯಕಾಶಿಯ
ಲಿಂಗನ ಸ್ಥಳದೊಳಳಿದರೆ
ಕಂಗಳೀರೈದು ಅತ್ತಲು ಪಂಚಮುಖವುಳ್ಳ
ಲಿಂಗವಹುದು ಸಿದ್ಧವೆಂದ ೯೯

ಇವನಾದಿನಾಥನು ಇವ ನಿರ್ಮಳಗುರು
ಇವ ಗೋರುಕ ಮಚ್ಛೆಂದ್ರ
ಇವ ಚವುರಂಗಮುನೆಂಬಾದಿಸಿದ್ಧನು
ಇವರೈವರು ಶಿಷ್ಯರೆಂದ ೧೦೦

ದುರುಳದೈವದ ವೆಗ್ಗಳ ಕಾಲಭೈರವ
ಸುರಮುನಿ ಸಕಲವಂದಿತನು
ಹಿರಿದು ರಾಕ್ಷಸರನೆಲ್ಲರ ಕೊಂದ ದುರ್ಗಿಯು
ವರದಂಬಿಕೆ ಪುಣ್ಯಶಕ್ತಿ ೧೦೧

ಹರನ ಭಾಳದಲಿ ಹುಟ್ಟಿದ ವೀರೇಶನು
ಸುರರ ಪಡೆದ ಭದ್ರಕಾಳಿ
ಧರೆಯೊಳಧಿಕ ಸುರಭಾಂಡೇಶ್ವರಲಿಂಗ
ಇವರ ನೋಡೆಂದು ವಂದಿಸಿದ ೧೦೨

ಇದು ಮುನಿಗಳ ಮೊತ್ತ ಇದು ಪಾವನ ತೀರ್ಥ
ಇದು ನವಸಿದ್ಧರ ಪಂತಿ
ಇದು ಕಾಶಿಯು ದೇವರಗುಡಿ ಬಾರೆಂದು
ಒದವಿ ಕಂಡರು ವಿಶ್ವಪತಿಯ ೧೦೩

ದೇವ ಜಯತು ಸುರಮುನಿವಂದ್ಯ ಲೋಕದ
ಪಾವನ ಹರಿಬ್ರಹ್ಮರೊಡೆಯ
ದೇವ ಜಯತು ಜಯ ಜಯ ಎಂದೆನುತಲಿ
ಭೂವರ ಅಡಿಗೆ ಎರಗಿದನು ೧೦೪

ತಂದೆ ಋಣವ ತಿದ್ದಿ ನಿಮ್ಮ ಕೂಡುವ ಪುಣ್ಯ
ಎಂದಿಗೆ ಕರುಣಿಪೆ ಎನಗೆ
ನಿಂದು ತೀರ್ಥವಕೊಂಡು ಪೊರಮಡೆ ತೆರಗಾರ
ಬಂದು ತೆಗೆದು ಘಾಸಿಮಾಡೆ ೧೦೫

ಅಡವನಿರಿಸಿ ತೆಗೆವರೆ ಏನು ಬಗೆಯಿಲ್ಲ
ಕೊಡುವರಾರಿಲ್ಲ ತಿದ್ದುವರೆ
ಒಡಲದಂಡಿಸಿ ಓಲೈಸೆ ದಾತರ ಕಾಣೆ
ನೃಡಬಲ್ಲನೆಂದು ಮರುಗಿದ ೧೦೬

ದಿನತುಂಬಿತು ಜೀಯ ಎನ್ನನಿಬ್ಬರ ಮಾರಿ
ಮುನಿಗೆ ಕೆಲವು ಬಂದಿತಾಗಿ
ಘನದುಃಖ ಉಬ್ಬಿ ಭೂಪಾಲ ಕಂಗಳ ಮುಚ್ಚಿ
ವನಿತೆಗೆ ಇಂತೆಂದು ನುಡಿದ ೧೦೭

ನಂಬಿ ಕೈವಿಡಿದ ಸತಿಯನು ದೇಶಕೆ ತಂದು
ಕೊಂಬುವರುಂಟೆಂದು ಕರೆದು
ಇಂಬುಳ್ಳಮಗನಿಬ್ಬರ ಮಾರಲಾಪೆನೆ
ಎಂಬುತ ಮರುಗಿದ ರಾಯ ೧೦೮

ಆಪತ್ತು ಕಾಲಕೆ ಸತಿಸುತರಲ್ಲದೆ
ಕೂಪರಾರುಂಟಯ್ಯ ನಿಮಗೆ
ಕೋಪವೇತಕೆ ಹುಸಿಬರಲು ಪಾತಕವೆನೆ
ಭೂಪನೊಪ್ಪಿದ ಮಂತ್ರಿಗೂಡಿ ೧೦೯



ಹರಿಶ್ಚಂದ್ರ ಸತಿಸುತರ ತಲೆಗೆ ಹುಲ್ಲನ್ನು ಸುತ್ತಿ ಮಾರುತ್ತಿರುವುದು.

ಸತಿಸುತರಿಬ್ಬರ ತಲೆಗೆ ಹುಲ್ಲನು ಸುತ್ತಿ
ಹಿತವಪ್ಪ ನಾಡುಬೀಡಿನಲಿ
ಪೃಥುವಿಪಾಲಕ ಹರಿಶ್ಚಂದ್ರನ ರಾಣಿಯ
ಸುತನ ಮಾರುವೆನೆಂದು ಸಾರೆ ೧೧೦

ಮುನಿ ಸೂಚಿಸೆ ಅಗ್ನಿದೇವರಲ್ಲಿಗೆ ಬಂದು
ಘನವಿಪ್ರವೇಷದಿ ನಿಂದು
ವನಿತೆಯೆಲ್ಲಿಯವಳೀಕೆ ಮುಪ್ಪಿನವಳು ಎನೆ
ಎನಗುಳ್ಳರಿವರಿಬ್ಬರೆಂದ ೧೧೧

ಈ ಸತಿಸುತರಿಗೆ ಹೊನ್ನೆಷ್ಟು ಪೇಳೆನೆ
ಮಾತನಾಡಿದನು ಭೂಪಾಲ
ದಾತ ನೀ ಪಾಲಿಸು ನಿನ್ನ ಚಿತ್ತದೊಳುಳ್ಳ
ನೀತವಾಗಿಹ ಹೊಸಹೊನ್ನ ೧೧೨

ಕೊಟ್ಟಪೆ ನಾಲ್ವತ್ತೆಂಟುಸಾವಿರವೆನೆ
ದುಷ್ಟಮುನಿಗೆ ಬಂದಿತಾಗಿ
ಇಷ್ಟುದಿನ ನನ್ನ ಊಟ ವೀಳ್ಯಕೆ ಸರಿ
ಕೊಟ್ಟುದಿಲ್ಲವು ಸಾಲಕೆಂದ ೧೧೩

ಅಪ್ಪ ನೀ ಕಾಡಲೇತಕೆ ಪಾಪಿಕರ್ಮಿಯು
ವಿಪ್ರನ ಕೇಳೆಂದ ಮುನಿಪ
ತಪ್ಪಲ್ಲ ಕೊಡಬಹುದೆನೆ ರಾಯನು ನೊಂದು
ಒಪ್ಪಿ ಹೋಗೆಂದನೀರ್ವರನು ೧೧೪

ಸತಿಯ ಮೊಗನೋಡಿ ಮತಿಗೆಟ್ಟು ರಾಯನು
ಶತಬಾಣ ತಾಗಿದಂದದಲಿ
ಅತಿದುಃಖದಲಿರೆ ಸತಿಬಂದು ಚರಣಕ್ಕೆ
ಖತಿಬೇಡ ಕಳುಹು ಭೂಪಾಲ ೧೧೫

ಕೊಟ್ಟು ಕೊಂಡೊಡೆಯನು ಸಾನಿದ್ದು ಮಾರಿದ
ಭ್ರಷ್ಟಗೆ ನೀ ಹೇಳಬಹುದೆ
ದುಷ್ಟ ಬ್ರಾಹ್ಮಣ ಸದೆಬಡಿದು ಮಗುವ ಕೊಂದು
ಬಟ್ಟೆಯೊಳಗೆ ಎಳೆದೊಯ್ದ ೧೧೬

ಅರಿರಾಯರಿಗೆ ಸಿಕ್ಕಿದವನಲ್ಲ ಜೂಜಲಿ
ಧರೆಮೆಚ್ಚಿ ಸೋತವನಲ್ಲ
ಹಿರಿದುರಾಜ್ಯವು ಭಂಡಾರವು ಹೋಯಿತು
ಮರುಕುಳ್ಳ ಸತಿ ಮಗ ಹೋದ ೧೧೭

ಚಪ್ಪನ್ನದೇಶವನಾಳಿ ಮೂಲೋಕವ
ಒಪ್ಪಿಸಿ ಬಡವಮುನಿಗಾಗಿ
ಇಪ್ಪುದು ಶಿವಬಲ್ಲ ಮನವ ನೋಡುವೆನೆಂದು
ತಪ್ಪಲ್ಲ ನಡೆಯೆಂದ ಮಂತ್ರಿ ೧೧೮

ಎನ್ನ ಸತಿಯು ಮಗನನು ಮಾರಿ ಎಲೆಮಂತ್ರಿ
ಇನ್ನು ನಾಸಿರ್ದು ಫಲವೇನು
ಹೊನ್ನುಳ್ಳವರಿಗೆ ಎನ್ನನು ಮಾರಿ ಋಣವನು
ಚೆನ್ನಾಗಿ ತಿದ್ದೆಂದ ರಾಯ ೧೧೯

ಜೀಯ ಹಸಾದವೆನುತ ಮಂತ್ರಿ ಕೈಕೊಂಡು
ವ್ಯೆಯಿಕ್ಕಿ ಚರಣಕ್ಕೆರಗಿದ
ಜೀಯ ಖತಿಯ ಬಿಡು ಮನಸಿನೊಳಿಹ ನೋವ
ಅಯ್ಯನ ಮುಂದೆ ಸಾರುವೆನು ೧೨೦

ರವಿಕುಲವಂಶ ತ್ರಿಶಂಕುವಿನ ನಂದನ
ಭುವನೇಶ ಹರಿಶ್ಚಂದ್ರನನು
ತವಕದಿ ಮಾರುವೆ ಹೊಸಹೊನ್ನ ಕೊಡಿಯೆಂದು
ಹವಣಿಸಿ ಕೇಳಿದ ಮಂತ್ರಿ ೧೨೧

ಹಿಂದೆ ಕೌಶಿಕನ ಪ್ರೇರಣೆಯಿಂದ ಮೆಲ್ಲನೆ
ಬಂದನು ವೀರಬಾಹುಕನು
ಮುಂದಲೆಯೊಳು ಶಿಖಿ ಮೊರೆವ ಲಹರಿಯೊಳು
ಕಂದಲ ಸುರೆ ಕಂಕುಳಲಿ ೧೨೨

ಹತ್ತಿದೊಡಲು ಹಂಕಣಿದಲೆ ಮೊಲೆಗಳು
ಸತ್ತ್ರನಾಯ್ಗಳ ತೊಗಲಂತೆ
ಕೆತ್ತಿದಂದದಿ ಮೂಗು ಕಿರಿದಿಹ ಹೊರಹಲ್ಲು
ಮತ್ತೆ ಹೊಲತಿ ಬಂದಳೊಡನೆ ೧೨೩

ನಿಂದಲ್ಲಿ ಕುಡಿದು ಸಂಬಳಿಗೋಲ ತಿರಹುತ
ಒಂದಾಗಿ ಹಡಪಿಗ ಸಹಿತ
ಮುಂದುವರಿದು ಕೇಳು ಹೊನ್ನ ಕೊಡುವೆನೆನೆ
ಬಂದು ಕೇಳಿದ ಹಡಪಿಗನು ೧೨೪

ಎನ್ನೊಡೆಯನು ವೀರಬಾಹುಕ ಕಳುಹಿದ
ನಿನ್ನವರಾರು ಮಾರುವರು
ಎನ್ನಲು ಗರ್ಜಿಸಿ ಹರಿಶ್ಚಂದ್ರರಾಯನು
ನನ್ನ ಹೊಲೆಯನೆ ಕೊಂಬುವನು ೧೨೫

ಕಾಲಗತಿಯೊ ಸಿಂದನೆಲದ ಗುಣವೋ ಎನ್ನ
ಮೇಲಾದ ಕರ್ಮದ ಫಲವೊ
ಮೇಲುಗುಲದವನ ಕೀಳುಗುಲದವ ಬೇಡಲು
ಶೂಲಿ ಬಲ್ಲನು ಎಂದ ರಾಯ ೧೨೬

ಎನಲು ತಿರುಗಿದನು ಹಡಪದ ಕಸುಕನು
ಘನಕೋಪಮಾಡಿ ಎಮ್ಮುವನು
ಬಿನುಗು ಹೊಲೆಯು ಕೇಳಲುಬಹುದೆ ಎಂದು
ಕನಲಿ ಕೋಪಿಸಿದ ಎಮ್ಮುವನು ೧೨೭

ಅಲ್ಲಿಗೆ ವೀರಬಾಹುಕ ಬೇಗದಿ ಬಂದು
ಬಲ್ಲವರಿಂತು ನುಡಿವರೆ
ಎಲ್ಲಕೆ ಹೊಲೆಯು ಹುಸಿದವನೇ ಎನೆ ರಾಯ
ಇಲ್ಲಿ ಹುಸಿಕರಾರೆಂದ ೧೨೮

ಹೊನ್ನುಳ್ಳ ಧನಿಕರಾರಾದರು ಕೊಳಿಯೆಂದು
ಮುನ್ನ ನೀವ್‌ನುಡಿದು ಸಾರಿದಿರಿ
ಇನ್ನು ದ್ವಿಜರು ಕೊಳ್ಳಲಿಯೆಂಬ ಮಾತನು
ಚೆನ್ನಾಗಿ ಹೊಲೆಯು ನೀನೆಂದ ೧೨೯

ಸೃಷ್ಟಿಯ ನಾಳಿ ನರಕಕ್ಕೆ ಭಾಜನನಾಗಿ
ಕೊಟ್ಟ ನಂಬುಗೆ ಮಾತ ಹುಸಿದು
ಅಷ್ಟನರಕಿಗಳು ಇದಕೆ ತಕ್ಕವರಲ್ಲ
ಪಟ್ಟಕೆ ರಾಯರಾದವರು ೧೩೦

ನೆಟ್ಟನೆ ನೋಡಲಾಗದು ನುಡಿದರೆ ಕರ್ಣ
ದುಷ್ಟರೆನುತ ತಿರುಗಿದನು
ಸೃಷ್ಟೀಶ ಭಾಪು ವಿಧಿಯೆ ಶಿವಶಿವ ಎಂದು
ಮುಟ್ಟಿಕೊಂಡನು ತನ್ನ ಫಣೆಯ ೧೩೧

ತಂದೆ ವಿಶ್ವಾಮಿತ್ರ ಮುನಿದೆನ್ನ ಹೊಲೆಯರ
ಕಂದಗೆ ಕಡೆಮಾಳ್ಪನೆಂದು
ಅಂದು ನುಡಿದನಿದು ತಪ್ಪದು ನಾನೊಲ್ಲೆ
ನೆಂದರೆ ಹುಸಿಕನಾಗುವೆನು ೧೩೨

ತಂದೆ ಚಿತ್ತೈಸು ನಾನರಿಯದೆ ನುಡಿದೆನು
ಎಂದೆನೆ ವೀರಬಾಹುಕನು
ನಿಂದೇನೆಲೊ ಭ್ರಷ್ಟಹುಸಿಕ ಹೊಲೆಯನೆನೆ
ಬಂದು ರಕ್ಷಿಸು ಹೊನ್ನನೆಂದ ೧೩೩

ಕೊಟ್ಟಪೆ ನೂರಾರು ಸಾವಿರವನು ಎನೆ
ಸೃಷ್ಟಿಪಾಲಕ ಕೈಮುಗಿದು
ನೆಟ್ಟನೆ ಕರಿಯ ಮೆಟ್ಟಿ ಕವಡೆಯಲೆಚ್ಚಷ್ಟು
ಮುಟ್ಟದ ಹೊಸಹೊನ್ನ ಕೊಡಿಸು ೧೩೪

ದುಷ್ಟಮುನಿಗೆ ತಿದ್ದಿ ಋಣವ ಹಿಂಗಿಸು ಎನೆ
ಬೆಟ್ಟದಂದದಿ ಸುರಿಸಿದನು
ಇಷ್ಟೊಂದಮಾಡಿ ಹೇಳಿದರೆ ಕೇಳುವನೆನೆ
ಕೊಟ್ಟು ಮುನಿಗೆ ಇಂತೆಂದ ೧೩೫

ತಂದೆ ನೀ ದೇಶದೇಶವ ಸುತ್ತಿ ಬಳಲಿದೆ
ಬಂದಿತೆ ನಿಮ್ಮಯ ಋಣವು
ಎಂದಿಗೆ ಕರುಣವ ಬಿಡದಿರಿ ಮಗನೊಳು
ಎಂದು ಚರಣಕೆರಗಿದನು ೧೩೬

ಭಾಪು ಸತ್ಯರ ದೇವ ನೀನಲ್ಲದೆ ಇನ್ನು
ಭೂಪಾಲರುಂಟೆ ದೇಶದಲಿ
ಈ ಪರಿಯೇಕೆ ನಾಚಿಸಿದೆ ಎಮ್ಮನು ನಿನ್ನ
ಕಾಪಾಲಿ ಒಲಿದು ರಕ್ಷಿಸಲಿ ೧೩೭

ತಂದೆ ವಿಶ್ವಾಮಿತ್ರ ಹೆತ್ತಯ್ಯ ದೇವಗೆ
ಬಂದಿತು ಎಂದು ಚಿತ್ತೈಸಿ
ಎಂದು ಕೈಮುಗಿದು ಮಂತ್ರಿಯನತ್ತ ಕಳುಹುತ್ತ
ಬಂದನು ಹೊಲೆಗೇರಿಗಾಗಿ ೧೩೮

# ನಾಲ್ಕನೆಯ ಸಂಧಿ

ಸುಟ್ಟಮಾಂಸದ ಒಟ್ಟಲ ಜೊಂಡೆಗರುಳಿನ
ಅಟ್ಟ ರಕುತದಡಗುಗಳ
ಒಟ್ಟದ ತೊರಳೆ ಮುರಿದ ತಲೆಯಡಿಗೆಯು
ಇಟ್ಟಣಿಸಿತು ಅಂಗಳದಿ ೧

ಮೂಳೆಯ ಮಾಂಸ ತಳಿಲು ಸುಡುಗೊಳ್ಳಿಯು
ನೀಳದ ಹುರಿಯು ಬಾರುಗಳು
ತಾಳಿಸಿ ತಿಂಬ ಸೀಗುಡಿ ಕರಿಮೀನಿನ
ಗೂಳಯುವನು ಕಂಡ ರಾಯು ೨

ಹೊರಗೆ ಹಾಸಿದ ಹಸಿಯ ದನದ ಚರ್ಮವು
ತರಿದ ಕರುವಿನ ಮಾಂಸಗಳು
ಕುರಿ ಹಂದಿ ಕೋಳಿಯ ರಕ್ತದ ಕೆಸರನು
ಸುರಿದು ಹಾಡುತ ಕುಣಿವವರು ೩

ಎಲುವಿನ ಎಕ್ಕೆ ನರದ ಪಟ್ಟೆ ಮಂಚಕೆ
ಬಲುದೊಗಲಿನ ಹಾಸಿಕೆಯು
ಕುಲಗಿರಿಯಂತೆ ಕುಳಿತ ವೀರಬಾಹುಕ
ನಲಿದು ಸುರೆಯ ತಾರೆಂದ ೪

ಮಂಚದ ಕೆಳಗೆ ಬರಿಯ ನೆಲದಮೇಲೆ
ವಂಚನೆ ಎರಡ ನೆನೆಯದೆ
ಮಿಂಚುವ ಎಲು ಸುರೆ ಹೊಲಸಿನ ನಾತಕ್ಕೆ
ಸಂಚಲಿಸದೆ ಕುಳ್ಳಿರ್ದ ೫

ಅಡಗ ಮೆಲ್ಲುತ ಸುರೆಗುಡಿವುತ ಕಾಲನು
ಎಡದ ಪೆಗಲ ಮೇಲೆ ನೀಡೆ
ಬಡಗಿರಿಯಂತೆಯಿರಲು ರಾಯನೊತ್ತುತ
ನುಡಿದನು ವೀರಬಾಹುಕನು ೬

ಎಲವೊ ನೀ ಧೀರರಾಯನು ಆಗಿ ನೆಲದಲ್ಲಿ
ಚಲವಿಲ್ಲದೆ ಕುಳಿತಿರ್ದೆ
ಸುಲಲಿತ ರವಿಕುಲವಾದರೆ ಹೊಲೆಯನ
ಕುಲವ ನೋಡದೆ ಕಾಲ್ಪಿಡಿದೆ ೭

ಉತ್ತಮ ಶಿವನರ್ಚಕನಾಗಿ ಹೊಲಸಿಗೆ
ಚಿತ್ತ ಹೆಡ್ಡೈಸದೆ ಇಹರೆ
ಮತ್ತಾ ಸಿರಿ ಭಾಗ್ಯವು ಹೋದರೆ ನಿನ್ನ
ಉತ್ತಮಿಕೆಯು ಹೋಗಬಹುದೆ ೮

ಹಸುವನಿರಿ ತಾಯಕೊಲ್ಲು ಬ್ರಾಹ್ಮಣಶಿಶು
ಕೊಸರು ಹಾವನು ಹಿಡಿಯೆನಲು
ಮುಸೆದು ಮಾರಿಗೆ ನಡೆ ಹುಲಿಯೊಳು ಕಾದೆನೆ
ಪಿಸುಣತ್ವ ನಾನೊಲ್ಲದಿರಲು ೯

ಕೊಟ್ಟು ಧನವ ನೀನಾಳೆಂದು ಸಲಹಲು
ಇಷ್ಟಕೆ ಹಿಂದುಗಳೆದರೆ
ಸೃಷ್ಟಿಯೊಳಪಕೀರ್ತಿ ಒಡೆಯನ ಸೇವೆಯ
ಮುಟ್ಟಿಮಾಡಲು ಪುಣ್ಯ ನಮಗೆ ೧೦

ಕೇಳು ಚಂದುಗ ರುದ್ರಭೂಮಿಗೆ ನೀ ಹೋಗಿ
ಹೂಳುವ ಹೆಣಕೆ ಹಾಗವನು
ಮೇಳದಿಂದಲಿ ಹೋಗು ಸೀರೆಯ ಬಿಡದಿರು
ತಾಳು ಸೆರಗಿನ ಅಕ್ಕಿಯನು ೧೧

ಕೊಟ್ಟು ಸಂಬಳಿಗೋಲು ಮುದ್ರೆಯು ನಿನಗೆಂದು
ಕೊಟ್ಟಲ್ಲದೆ ಸುಟ್ಟವರ
ಕುಟ್ಟಿ ತಲೆಯನಿಡು ಹರೆಯನು ಹೊಯ್ಯುತ
ದಿಟ್ಟನಾಗಿರು ಹೋಗೆಂದ ೧೨

ಹಿಡಿದ ಸಂಬಳಿಗೋಲು ಕಂಬಳಿಗೊಪ್ಪೆಯು
ಸಡಗರದಿ ಹರೆಯ ಬಾಜಿಸುತ
ಒಡೆಯಗೆ ವಂದಿಸಿ ತಿರುಗಿ ಬೇಗದೊಳಾಗ
ನಡೆದು ಸಾರಿದನು ಪಟ್ಟಣದಿ ೧೩

ಕುಟ್ಟುತ ಹರೆಯ ಸಂಬಳಿ ಸಂಬಳಿ ಎಂದು
ಇಟ್ಟಣಿಸಿದ ಸಭೆಯೊಳಗೆ
ಕೊಟ್ಟನೆನ್ನೊಡೆಯನು ವೀರಬಾಹುಕನೆಂದು
ಹುಟ್ಟಿದ ನೆಲಹಾಗ ಸೆರಗ ೧೪

ಎಂದು ಕೂಗುತ ಒರಲುತ ಮೈದೋರುತ
ಬಂದು ಹೊಕ್ಕನು ಸುಡುಗಾಡ
ಮುಂದುವರಿದು ಭೂತ ಶತಕೋಟಿ ಇದಿರಾಗಿ
ಕುಂದದೆ ಕೂಗಿಯುಟ್ಟಿದವು ೧೫

ಪಿಡಿದ ಖಂಡೆಯದಿ ಜೊಬ್ಬೆಯ ಮಾಡಿ ಹರಿಶ್ಚಂದ್ರ
ಹೊಡೆಯುತ ಎಲ್ಲವನೋಡಿಸಿದ
ಕಡೆಯಲ್ಲಿ ಅರೆಬೆಂದ ಹೆಣನೆದ್ದು ಉರುಳಿದವು
ಹೊಡೆದ ಶೂಲದೊಳ್ ಬಲುಹೆಣನ ೧೬

ಹುಳ್ಳಿಯ ಮೇಲೆ ಹೆಣನನಿಕ್ಕಿ ಸುಡುತಿರೆ
ಅಲ್ಲಿಗಲ್ಲಿಗೆ ಹರಿದಾಡಿ
ಎಲ್ಲರು ಕೂಡಿ ಕೊಡದೆ ಸುಟ್ಟರಾದಡೆ
ಬಲ್ಲಿದ ಬಾಹುಕನಾಣೆ ೧೭

ಪಟ್ಟದ ರಾಯನ ಪಾದದಾಣೆಯು ಎನೆ
ಕೊಟ್ಟು ಮನ್ನಿಸಿ ಕಳುಹಿದನು
ನೆಟ್ಟನೆ ಶೂಲದ ಮರ ಹಳೆಯ ಸಿದ್ದಿಗೆಯ
ಕಟ್ಟಿ ತವಗಮಾಡಿ ಕುಳಿತ ೧೮

ಮಿಂದು ಕಾಶಿಯಲಿ ಪ್ರಧಾನ ತೀರ್ಥವ ಕೊಂಡು
ತಂದಿತ್ತ ಹರಿಶ್ಚಂದ್ರನೆಡೆಗೆ
ಹಿಂದನೆಣಿಸದಿರಿ ಧೈರ್ಯವ ಬಿಡದಿರಿ ಶಿವ
ಬಂದೊಲಿವನು ನಮಗೆಂದ ೧೯

ಎಂದು ಕೈಮುಗಿದು ಇರುಳ ಕಳಿದಾ ಮಂತ್ರಿ
ಬಂದನು ಕಾಶಿಯಗುಡಿಗೆ
ಕಂದ ಒಡೆಯನ ಮನೆಗೆ ಕಟ್ಟಿಗೆಯನು
ತಂದಪೆನೆಂದು ಬೇಗದೊಳು ೨೦

ಬಂದು ಮಕ್ಕಳಗೂಡಿ ಗಿಡುವಿಗೆ ನಡೆತಂದು
ಚಂದದಿ ಹೊರೆಗಟ್ಟಿ ನಿಲಿಸಿ
ಇಂದೆಮ್ಮ ಒಡೆಯನ ಕರುವಿಗೆ ಹುಲ್ಲನು
ಒಂದು ಹಿಡಿಯ ಕೊಯ್ವೆನೆಂದು ೨೧

ಕಂದ ಲೋಹಿತ ಕುಡುಗೋಲಿತ್ತಿ ಕೊಯ್ಯಲು
ಬಂದು ಹುತ್ತದ ಘಟಸರ್ಪ
ಬಂಧಿಸಿ ಕೈಯ ಕಚ್ಚಲು ಹಾಹಾ ಎಂದು
ಚಂದ್ರನಗ್ರಹಣ ಕೊಂಡಂತೆ ೨೨

ಇತ್ತ ಚಂದ್ರಮತಿ ವಿಪ್ರನ ಮನೆಯೊಳು
ಸುತ್ತು ಹುಟ್ಟುತ ಗೆಯ್ಯುತಿರಲು
ಚಿತ್ತದಿ ಮಗ ಬಾರನೆಂದು ದುಃಖದಲಿರೆ
ಕತ್ತಲೆ ಬಲಿಯೆ ಕಂಗೆಟ್ಟು ೨೩

ಅಡವಿಯೊಳಗೆ ಹೋಗಿ ಹೊಲಬುಗೆಟ್ಟನೊ ಹುಲಿ
ಗಿಡುವಿನೊಳಗೆ ಮುರಿದಪವೊ
ಹಿಡಿದು ಕಳ್ಳರು ಹೊಯ್ದರೊ ಭೂತ ಹೊಡೆದುದೊ
ಪಿಡಿದು ಸರ್ಪಗಳು ನುಂಗಿದವೊ ೨೪

ಕಡುಕಂಗೆಟ್ಟು ನೀರರತು ಬೆಂಡಾದನೊ
ಸಿಡಿಗೊಂಬನೇರಿ ಅಳಿದನೊ
ನಡೆವಲ್ಲಿ ಕಾನನದೊಳು ಬಿದ್ದನೊ ಎಂದು
ನುಡಿದು ನಿಂದಳು ರಾತ್ರಿಯಲಿ ೨೫

ಕತ್ತಲೆಯೊಳು ಸರಕೆನೆ ಲೋಹಿತನೆಂದು
ಹಿತ್ತಲೊಳಗೆ ನಿಂದು ಕರೆದು
ಮತ್ತಾರೊ ಬರಲು ಲೋಹಿತ ಲೋಹಿತನೆಂದು
ಹೊತ್ತಿ ಹೊದರಿ ಬೇಯುತಿಹಳು ೨೬

ಮತ್ತೊಬ್ಬ ಒಡನೆ ಕಟ್ಟಿಗೆಗೆ ಹೋದವ ಬಂದು
ಒತ್ತಿನೊಳಗೆ ನಿಂದು ಸತಿಯು
ಸತ್ತ ನಿನ್ನಯ ಮಗ ಫಣಿ ಕಚ್ಚಿ ಒಡಗಣ
ಹುತ್ತದ ಮರದ ನೆಳಲಿನಲಿ ೨೭

ಕೇಳಲೊಡನೆ ಘೊಳ್ಳೆಂದು ನೆಲಕೆ ಬಿದ್ದು
ತಾಳದೆ ಹೊರಳಿ ಹುಡಿಯಲಿ
ಹೇಳುವೆ ಎನ್ನೊಡೆಯಗೆ ಎನುತಲಿ ಬಂದು
ಏಳಿಸಿ ನಿದ್ರೆಯ ತಿಳುಪಿ ೨೮

ಏಕೆನ್ನ ಕಾಡಿ ನಿದ್ರೆಯ ಕೆಡಿಸಲು ಬಂದೆ
ನೂಕು ನೂಕೆಂದನಾ ವಿಪ್ರ
ನೀ ಕರುಣಿಸು ಮಗ ಫಣಿ ಕಚ್ಚಿ ಸತ್ತನು
ಬೇಕಾದ ಕಾನನದೊಳಗೆ ೨೯

ತಂದೆ ಮನುಷ್ಯರ ಕೊಡು ಹೋಗಿ ನೋಡುವೆ
ಎಂದರಾರಿಲ್ಲ ರಾತ್ರಿಯಲಿ
ಇಂದು ಅಡವಿಯೊಳೆನ್ನಸು ಆರು ತಿಂಬರೊ
ಕಂದನ ದಹಿಸಿ ಬಂದಪೆನು ೩೦

ಇಂದಿನ ಕೆಲಸ ನಾಳಿನ ಕೆಲಸವನೆಲ್ಲ
ಇಂದೆ ನೀ ಗೈದು ಹೋಗೆನಲು
ಒಂದು ಘಳಿಗೆಗೆ ಗೈದಳು ಆ ಕೆಲಸವ
ಬಂದು ಹೊಕ್ಕಳು ಕಾನನವ ೩೧

ಕಗ್ಗತ್ತಲೆ ಬಿರುಗಾಳಿ ದಾರಿಯ ಮುಳ್ಳು
ತಗ್ಗು ಹಳ್ಳವು ಜರಿಗಳಲಿ
ಮುಗ್ಗುತೆಡಹುತ ಬೀಳುತ ಬಸವಳಿಯುತ
ಬಗ್ಗಿ ಕಂಡಳು ತನ್ನ ಮಗನ ೩೨

ಮಗನ ಕಾಣುತ ಬಾಣ ಉಗಿದಂತೆ ಬೆನ್ನಲಿ
ನೆಗೆದು ಬಿದ್ದಳು ಮುಖವಡಿಯು
ಅಗಲಕ್ಕೆ ಹೊರಳಿ ಶೋಕವ ಮಾಡಿ ಕಂದನ
ತೆಗೆದಪ್ಪಿ ತೊಡೆಯ ಮೇಲಿಟ್ಟು ೩೩

ಅತ್ತರೇತಕೆ ನೋಡೆ ಕರೆಯೇಕೆ ಕಂದಯ್ಯ
ಮತ್ತೇಕೆ ನುಡಿಸೆ ಎನ್ನುವನು
ಒತ್ತಿನೊಳಗೆ ಇದ್ದು ಓ ಎನ್ನಲಾಗದೆ
ಉತ್ತಮಕುಲದ ಚೆನ್ನಿಗನೆ ೩೪

ಸೃಷ್ಟಿಯೊಳಧಿಕ ಹರಿಶ್ಚಂದ್ರರಾಯನ
ಪಟ್ಟದಕುವರ ನೀನಾಗಿ
ದುಷ್ಟರಾಯರ ಗೆದ್ದು ಲೋಕಾಧಿಪತಿಯಾಗಿ
ಬೆಟ್ಟದೊಳಳಿವರೆ ಮಗನೆ ೩೫

ಬಂಜೆಯಾಗಿ ಋಷಿಗಳ ಪಾದಕೆ ನಾನು
ವಂದಿಸಿ ನಿನ್ನನು ಪಡೆದೆ
ಬಂದು ನೀನರೆವೆಣನಾಗಿ ಇಂತಳಿವುದು
ಚಂದವೆ ಇನಕುಲತಿಲಕ ೩೬

ದೇಶ ರಾಜ್ಯವು ಐಶ್ವರ್ಯವೆಲ್ಲವ ಬಿಟ್ಟು
ಹೇಸದೆ ನಾನು ತೊತ್ತಾಗಿ
ವಾಸಿ ನಿನಗೆ ಸಲುವಾಗಿ ನಾನುಳಿದೆನು
ದೋಷಿಯು ಬಾರೆನ್ನ ಮಗನೆ ೩೭

ಪಾಲು ಸಕ್ಕರೆ ಅಮೃತಾನ್ನವ ನೀನುಂಡು
ಲೋಲಲೋಚನೆಯರೂಳಿಗದ
ಮೇಲಾದ ಸಿರಿಯು ಸೌಭಾಗ್ಯವೆಲ್ಲವ ಬಿಟ್ಟು
ಹಾಳಿನೊಳಳಿವರೆ ಮಗನೆ ೩೮

ನಡೆದರೆ ಕಾಲು ನೊಂದಾವೆಂದು ನಿಮ್ಮಯ್ಯ
ತೊಡೆಯ ಮೇಲೆ ನಿನ್ನ ಸಾಕಿ
ಒಡನೂಳಿಗದ ಹತ್ತುಸಾವಿರ ಬಾಲರು
ಅಡವಿಗೆ ಗುರಿಯಾದೆ ಮಗನೆ ೩೯

ಶೊತ್ತಾಗಿ ದುಡಿದಾಸೆಬಟ್ಟೆನೊ ಕಂದಣ್ಣ
ಹೊತ್ತುಹೊತ್ತಿಗೆ ನಿನ್ನ ನೋಡಿ
ಚಿತ್ತದಿ ದುಃಖವ ಮರೆದೆನೊ ಕಂದನೆ
ಕತ್ತಿತು ಎನ್ನಯ ಒಡಲು ೪೦

ರಾಜ್ಯಾಧಿಪತಿ ಹರಿಶ್ಚಂದ್ರನ ಗರ್ಭದಿ
ರಾಜಚಂದ್ರಮನಾಗಿ ಜನಿಸಿ
ರಾಜ್ಯವನಾಳಲೊಲ್ಲದೆ ಕಂದಯ್ಯ
ಓಜೆಯಾಯಿತೆ ಎಲೆ ಮಗನೆ ೪೧

ಹೆತ್ತವರೊಡನೆ ಮಾತಾಡದೆ ಕಂದಯ್ಯ
ಸತ್ಯವೆ ನಿನಗಿದು ಗುಣವೆ
ಇತ್ತಬಾರೆಂದು ಕರೆದು ಎನ್ನ ನುಡಿಸದೆ
ಚಿತ್ತದಿ ನೋವರೆ ಮಗನೆ ೪೨

ಬತ್ತಿತು ಎನ್ನಯ ಸಿರಿ ಈಗ ಕಂದಯ್ಯ
ಹೊತ್ತಿತು ಎನ್ನಯ ಒಡಲು
ಕೀರ್ತಿಯ ಕೊನೆ ಮುರಿಯಿತು ಪುತ್ರನೆಂದೆಂಬ
ಮಾತು ಮಸುಳಿಸಿತು ಮಗನೆ ೪೩

ನುಡಿಯೊಳು ಜಾಣ ಸತ್ಯದ ವಟವೃಕ್ಷವೆ
ಮೃಡಭಕ್ತ ಪುಣ್ಯದ ನಿಧಿಯೆ
ಒಡಲೊಳು ಜನಿಸಿ ಕಂಗಳಿಗೆ ರೂಪನು ತೋರಿ
ಆಡವಿಗೆ ಗುರಿಯಾದೆ ಮಗನೆ ೪೪

ಸೃಷ್ಟಿಯೊಳಧಿಕ ಹರಿಶ್ಚಂದ್ರರಾಯನ
ಪಟ್ಟದಕುವರ ನೀನಾಗಿ
ದುಷ್ಟರಾಯರ ಗೆದ್ದು ಲೋಕಾಧಿಪತಿಯಾಗಿ
ಬೆಟ್ಟದೊಳಳಿವರೆ ಮಗನೆ ೩೫

ಬಂಜೆಯಾಗಿ ಋಷಿಗಳ ಪಾದಕೆ ನಾನು
ವಂದಿಸಿ ನಿನ್ನನು ಪಡೆದೆ
ಬಂದು ನೀನರೆವೆಣನಾಗಿ ಇಂತಳಿವುದು
ಚಂದವೆ ಇನಕುಲತಿಲಕ ೩೬

ದೇಶ ರಾಜ್ಯವು ಐಶ್ವರ್ಯವೆಲ್ಲವ ಬಿಟ್ಟು
ಹೇಸದೆ ನಾನು ತೊತ್ತಾಗಿ
ವಾಸಿ ನಿನಗೆ ಸಲುವಾಗಿ ನಾನುಳಿದೆನು
ದೋಷಿಯ ಬಾರೆನ್ನ ಮಗನೆ ೩೭

ಪಾಲು ಸಕ್ಕರೆ ಅಮೃತಾನ್ನವ ನೀನುಂಡು
ಲೋಲಲೋಚನೆಯರೂಳಿಗದ
ಮೇಲಾದ ಸಿರಿಯು ಸೌಭಾಗ್ಯವೆಲ್ಲವ ಬಿಟ್ಟು
ಹಾಳಿನೊಳಳಿವರೆ ಮಗನೆ ೩೮

ನಡೆದರೆ ಕಾಲು ನೊಂದಾವೆಂದು ನಿಮ್ಮಯ್ಯ
ತೊಡೆಯ ಮೇಲೆ ನಿನ್ನ ಸಾಕಿ
ಒಡನೂಳಿಗದ ಹತ್ತುಸಾವಿರ ಬಾಲರು
ಅಡವಿಗೆ ಗುರಿಯಾದೆ ಮಗನೆ ೩೯

ತೊತ್ತಾಗಿ ದುಡಿದಾಸೆಬಟ್ಟೆನೊ ಕಂದಣ್ಣ
ಹೊತ್ತುಹೊತ್ತಿಗೆ ನಿನ್ನ ನೋಡಿ
ಚಿತ್ತದಿ ದುಃಖವ ಮರೆದೆನೊ ಕಂದನೆ
ಕತ್ತಿತು ಎನ್ನಯ ಒಡಲು ೪೦

ರಾಜ್ಯಾಧಿಪತಿ ಹರಿಶ್ಚಂದ್ರನ ಗರ್ಭದಿ
ರಾಜಚಂದ್ರಮನಾಗಿ ಜನಿಸಿ
ರಾಜ್ಯವನಾಳಲೊಲ್ಲದೆ ಕಂದಯ್ಯ
ಓಜೆಯಾಯಿತೆ ಎಲೆ ಮಗನೆ ೪೧

ಹೆತ್ತವರೊಡನೆ ಮಾತಾಡದೆ ಕಂದಯ್ಯ
ಸತ್ಯವೆ ನಿನಗಿದು ಗುಣವೆ
ಇತ್ತಬಾರೆಂದು ಕರೆದು ಎನ್ನ ನುಡಿಸದೆ
ಚಿತ್ತದಿ ನೋವರೆ ಮಗನೆ ೪೨

ಬತ್ತಿತು ಎನ್ನಯ ಸಿರಿ ಈಗ ಕಂದಯ್ಯ
ಹೊತ್ತಿತು ಎನ್ನಯ ಒಡಲು
ಕೀರ್ತಿಯು ಕೊನೆ ಮುರಿಯಿತು ಪುತ್ರನೆಂದೆಂಬ
ಮಾತು ಮಸುಳಿಸಿತು ಮಗನೆ ೪೩

ನುಡಿಯೊಳು ಜಾಣ ಸತ್ಯದ ವಟವೃಕ್ಷವೆ
ಮೃಡಭಕ್ತ ಪುಣ್ಯದ ನಿಧಿಯೆ
ಒಡಲೊಳು ಜನಿಸಿ ಕಂಗಳಿಗೆ ರೂಪನು ತೋರಿ
ಆಡವಿಗೆ ಗುರಿಯಾದೆ ಮಗನೆ ೪೪

ನೋಡುವ ಕಣ್ಣೊಳು ಸುಣ್ಣವ ಹೊಯ್ವರೆ
ಹಾಡುವ ಬಾಯೊಳಗೀಗ
ಜೋಡಿಸಿ ಮಣ್ಣನು ತುಂಬಿದೆ ಕಂದಯ್ಯ
ಈಡಾಡುವರೆ ಎನ್ನುವನು ೪೫

ದೇಶಾಧಿಪತಿಯ ಗರ್ಭದಿ ನೀನು ಜನಿಸಿಯೆ
ಲೇಸಾಗಿ ಅಮೃತಾನ್ನ ಉಂಡು
ಮೋಸವ ಮಾಡಿ ನಿಮ್ಮಯ್ಯಗೆ ಹೇಳದೆ
ಶೇಷಗೆ ಗುರಿಯಾದೆ ಮಗನೆ ೪೬

ಕಂದನಳಿವು ಒಡೆಯನ ಸೇವೆ ಬೆಳಗಾಗಿ
ಹಿಂದುಗಳೆಯೆ ಅಪಕೀರ್ತಿ
ಕಂದನ ಅಡವಿಗೆ ದಹಿಸಿಬಿಡುವೆನೆಂದು
ತಂದಳು ಸುಡುಗಾಡಿಗಾಗಿ ೪೭

ಕಿತ್ತು ಕರುಳು ಕೆದರಿದ ಮಂಡೆ ಕೊರಳೊಳು
ಸುತ್ತಿದ ಎಲುಮಾಲೆಗಳು
ಎತ್ತಿದ ಹೆಣಗೂಡಿ ಮರುಳು ಬೊಬ್ಬೆಯಕೊಟ್ಟು
ಮುತ್ತಿಕೊಂಡವು ಇದಿರಿನಲಿ ೪೮

ಒಡೆಯನ ಸೇವೆ ಪುತ್ರನ ನೋವು ಗಂಡನ
ಒಡಲೊಳಿರಿದ ದುಃಖಗಳು
ಕಡೆಗೆ ಲೆಕ್ಕಿಸದೆ ಮಸಣಗಾಡಿಗೆ ಬಂದು
ಕಡೆಯಲ್ಲಿ ಕಂದನನಿರಿಸೆ ೪೯

ಹಿಂದೆ ಸುಟ್ಟುಳಿದ ಕಡೆಯ ಕೊಳ್ಳಿಯನೆತ್ತಿ
ತಂದೊಂದು ಹುಳ್ಳಿಯ ಮಾಡಿ
ಕಂದನ ಮೇಲಿಟ್ಟು ಉರಿವ ಕೊಳ್ಳಿಯನಿಕ್ಕಿ
ಬಂದು ಬಿದ್ದಳು ಮುಖವಡಿಯ ೫೦

ಹೊರಳಿ ಶೋಕವ ಮಾಡಿ ಮಗನೆ ಮಗನೆ ಎಂದು
ಉರುಳಿ ದುಃಖದಿ ಬೇಯುತಿರಲು
ಧರಣೀಶ ನಿದ್ರೆತಿಳಿದು ಮೆಲ್ಲನೆ ಎದ್ದು
ಹರಿದು ಕೋಪದಿ ನೆಲಕಿಳಿದ ೫೧

ಅರ್ಧ ರಾತ್ರಿಯೊಳಗೆ ಹೆಣನನು ತಂದು
ಕದ್ದು ಸುಡುವ ಲಂಡಹೆಣ್ಣ
ಹದ್ದುಗೈಯನು ಕಟ್ಟಿ ತಲೆಯನರಿವೆನೆಂದು
ಹೊದ್ದಿದ ಹೆಣನ ಹಿಂಗಾಲ ೫೨

ಹಿಡಿದು ಕೆಲಕೆಯಿಟ್ಟು ಘುಡುಗುಟ್ಟಿ ಕೋಪದಿ
ಕಡೆಗೆ ಕೊಳ್ಳಿಯ ಕೆದರಿದನು
ಹಿಡಿದು ತಲೆಯ ಹೊಯ್ದು ಸತಿಯೆಂದು ಉಳುಹಿದೆ
ಕೊಡು ಎನ್ನ ನೆಲನ ಹಾಗವನು ೫೩

ಇಡದಿರು ಮಗನು ನೊಂದಾನು ಶಿವಶಿವ ಎಂದು
ಒಡನೆ ಬಿದ್ದಳು ಶ್ರವಗೂಡಿ
ಪಿಡಿದೆತ್ತಿ ಕಂದನ ಬಾಯೊಳು ಬಾಯಿಟ್ಟು
ಬಿಡದೆ ಶೋಕವ ಮಾಡಿದಳು ೫೪

ಬಿಸುಡದಿರಯ್ಯ ಈತನ ತೆರವರಿಯದೆ
ವಸುಧಾಧಿಪತಿಯ ಕುಮಾರ
ಶಿಶುವೆನ್ನ ಬಸುರಲ್ಲಿ ಬಂದುದಿಲ್ಲವು ನಿನ್ನ
ಬಸುರಲ್ಲಿ ಬಂದವನೆಂದು ೫೫

ಹಸನಾಗಿ ಸುಟ್ಟು ರಕ್ಷಿಸು ನಿನ್ನ ಮಗನೆಂದು
ವಿಷಮುವ ಬಿಡು ಕೃಪೆಯಾಗು
ಮಸಣದ ಹಾಗ ಹೆಣದ ಶೀರೆ ಬಾಯಕ್ಕಿ
ಒಸೆದಿತ್ತು ಸುಡು ಎಂದನಾಗ ೫೬

ಕೊಡಲು ಏನಿಲ್ಲವು ಎಲೆ ತಂದೆ ನಾನೊಬ್ಬ
ಬಡದಾಸಿ ಲೋಗರ ಮನೆಯ
ಕೊಡುವರಿಲ್ಲದಡೆ ಕೊರಳ ತಾಳಿಯನಿತ್ತು
ಕೊಡಿಸೆನ್ನ ನೆಲಹಾಗವನು ೫೭

ಕೆಟ್ಟೆನು ಹರಿಶ್ಚಂದ್ರರಾಯ ತಾನಳಿದನೊ
ಕಟ್ಟಿದ ಕೊರಳ ತಾಳಿಯನು
ಭ್ರಷ್ಟಹೊಲೆಯ ಕಂಡ ಕರಚೋದ್ಯವು ಎಂದು
ತೊಟ್ಟನೆ ಬಿದ್ದುರುಳಿದಳು ೫೮

ಕೊಟ್ಟಲ್ಲದೆ ಸುಡಲೀಸೆ ಎನ್ನೊಡೆಯನು
ದುಷ್ಟನು ವೀರಬಾಹುಕನು
ಮುಟ್ಟಿದ ಸೇವೆ ಹಿಂದುಳಿಯಬಾರದು ಈಗ
ಕೊಟ್ಟಲ್ಲದೆ ಸುಟ್ಟರಾಣೆ ೫೯

ದೇಶಾಧಿಪತಿಯ ಗರ್ಭದಿ ನೀ ಜನಿಸಿದೆ
ಲೇಸು ಮಸಣ ಹಗೆಯಾಗೆ
ಶಾಶ್ವತ ಕಟ್ಟಳೆ ಸಲುವಂಥ ಮಗನಿಗೆ
ದೋಷಿಯಾಣೆಯನಿಡಬಹುದೆ ೬೦

ಭೂಸುರರು ದಣಿವಂತೆ ದಾನವನೀವ
ದೇಶಾಧಿಪತಿಯ ಕುಮಾರ
ಲೇಸು ಹಾಗಕೆ ಗತಿಯಿಲ್ಲದಾಯಿತೆ ಎಂದು
ಓಸರಿಸುತ ಬಿದ್ದಳಾಗ ೬೧

ಹಿಂದೀಗಲಾವ ರಾಯನ ಮಗ ಭೂಮಿಯ
ನೆಂದಾಳಿದ ಇವನಾರು
ತಂದೆ ಕೇಳೆಮ್ಮ ವಂಶವನೆನೆ ರಾಯನ
ಕಂದಗೆ ಬಂದ ಕಂಟಕವ ೬೨

ಉತ್ತಮ ರವಿಕುಲ ತ್ರಿಶಂಕುರಾಯನ
ಪುತ್ರನು ಹರಿಶ್ಚಂದ್ರನೃಪನು
ಪೆತ್ತಮಗನು ಲೋಹಿತಕುಮಾರಕನು
ಹೆತ್ತಂಥ ತಾಯಿ ತಾನೆಂದು ೬೩

ಕಂದನೇತಕೆ ಅಳಿದನು ಕಾರಣವೇನು
ಎಂದು ಕೇಳಲು ಹೇಳಿದಳು
ಕಂದಗೂಡೆನ್ನ ಮಾರಿದ ಭೂಪಾಲಗೆ
ತಂದಪೆನೆಂದು ಕಟ್ಟೆಗೆಯ ೬೪

ಕಂದ ಹೋಗಲು ಫಣಿ ಕಚ್ಚಿ ಬಿದ್ದಿರಲಾಗಿ
ತಂದೆನು ಸುಡುಗಾಡಿಗಾಗಿ
ಎಂದು ನುಡಿಯೆ ಭೂಪಾಲ ಸ್ವೈವೆರಗಾಗಿ
ನೊಂದು ನುಡಿದನು ಇಂತೆಂದು ೬೫

ನುಡಿಯಲರಿಯದೆ ರಾಜ್ಯವು ದೇಶವ ಬಿಟ್ಟು
ಕಡೆಗೆ ಚಾಂಡಾಲಗಾಳಾಗಿ
ಹಡದ ಕುಲವ ಬಿಟ್ಟು ಸತಿಸುತರ ಮಾರಿದ
ಕಡುಪಾಪಿಯುನೇಕೆ ನೆನೆವೆ ೬೬

ಜಡೆಯ ಹೊತ್ತರೆ ಅಸ್ಥಿಮಾಲೆಯ ತೊಟ್ಟರೆ
ಕಿಡಿಗಣ್ಣು ನೊಸಲೊಳೊಪ್ಪಿದರೆ
ಮೃಡನಲ್ಲವೆ ಹರಿಶ್ಚಂದ್ರನಂತಿರಲೆನ್ನ
ಒಡೆಯನಲ್ಲವೆ ಕೇಳೊ ಹೊಲೆಯ ೬೭

ಸತಿ ಹೋಗಲಿ ರಾಜ್ಯ ದೇಶ ತಾ ಹೋಗಲಿ
ಸುತನಳಿಯಲಿ ರಾಯ ನಿನಗೆ
ಖತಿ ಮನಸಿನಲಿಲ್ಲದೆ ಸತ್ಯ ನಿಂದರೆ
ಶತಲಾಭ ಹೊಲೆಯ ನೀ ಕೇಳೊ ೬೮

ನಿಂದು ಧ್ಯಾನಿಸಿ ಭೂಪಾಲ ಹಾಹಾ ಎಂದು
ಬಂದು ಬಿದ್ದನು ಸುತನಡಿಯ
ನಂದೀಶನ ಕೃಪೆ ನಿನಗಿಲ್ಲದಾಯಿತೆ
ಕಂದ ಎನುತ ಹೊರಳಿದನು ೬೯

ಅರಿರಾಯರ ಗೆದ್ದು ಧುರವಿಜಯನಾಗಿ
    ಸುರರ ಮನ್ನಿಸಿ ದೇಶಪ್ರಜೆಯ
ಧರೆಯ ರಕ್ಷಿಸಿ ರವಿಕುಲವ ನೀನುಳುಹದೆ
    ಉರಗನೊಳಳಿವರೆ ಮಗನೆ ೨೦

ಧರೆಯೊಳಧಿಕ ತ್ರಿಶಂಕುವಿನ ಮೊಮ್ಮಗನಾಗಿ
    ವರಚತುರಂಗವನಾಳಿ
ಧುರದೊಳಗರಿರಾಯರ ಗೆದ್ದು ಬಾರದೆ
    ಉರಗನೊಳಳಿವರೆ ಮಗನೆ ೨೧

ಧರೆಗಧಿಕ ಕಾಶಿಯ ವಿಶ್ವಪತಿಯುಂಟು
    ಹಿರಿದು ಪೂಜಿಸೆ ಭಾಗ್ಯವುಂಟು
ಹಿರಿದು ರಕ್ಷಿಸಿ ಎನ್ನನು ನೀ ಸಲಹದೆ
    ಉರಗನೊಳಳಿವರೆ ಮಗನೆ ೨೨

ಹಿಂದೆ ನೀ ಪಡೆದ ರಾಜ್ಯವ ಪರರಿಗೆ ಇತ್ತು
    ತಂದಿಬ್ಬರನು ಮಾರಿದೆನು
ಬಂದು ಚಾಂಡಾಲ ಸೇವೆಗೆ ರವಿಕುಲಕೀಗೆ
    ಕುಂದ ತಂದೆನೆಂದ ರಾಯ ೨೩

ಅರಿರಾಯರೊಳು ಕಾದಿ ಮಡಿದವ ನೀನಲ್ಲ
    ಸುರರ ಯಜ್ಞಕೆ ಮಗ್ಗಲಿಲ್ಲ
ಧರೆಗೆ ನೀನಳಿದವನಲ್ಲ ಶರೀರವ
    ಅರಿದವರ್ಗಿತ್ತವನಲ್ಲ ೨೪

ಸುರಭುಜಂಗಮಯಕ್ಷರಾಕ್ಷಸರನು ಗೆದ್ದು
ಧರೆಗತಿಭುಜಬಲನೆನಿಸಿ
ಸಿರಿ ಹೋದರೆ ಭುಜಬಲವು ತಾ ಹೋಹುದೆ
ಉರಗನೊಳಳಿವರೆ ಮಗನೆ ೭೫

ಸಿರಿ ರಾಜ್ಯವು ರೂಪು ಗುಣ ಭುಜಬಲವನು
ಹಿರಿದು ಹೊಗಳೆ ಫಲವೇನು
ತರಣಿಮೂಡಲು ಎನ್ನೊಡೆಯ ಕೋಪವ ಮಾಳ್ಪ
ಉರಿಯೊಳು ಕೂಡೆಂದಳರಸಿ ೭೬

ಕೇಳು ಮರುಳೆ ನಿಮ್ಮವರಿಗೆ ಬಹುದಿನ
ಊಳಿಗ ಹುಲ್ಲು ಕಟ್ಟಿಗೆಯು
ಕಾಲಕೊನ್ಮೊನ್ಮೆ ಬಿಟ್ಟಿಯ ಮಾಡಿ ಬಲ್ಲೆನು
ತಾಳದಿತ್ತೆನು ಅದರಿಂದ ೭೭

ಬಾಲೆ ಎನ್ನೊಡೆಯನ ರೊಕ್ಕ ತಾ ಹೋಹುದು
ಹೇಳದಿರಾ ಮಾತನೆನಗೆ
ಕೇಳು ನಿನ್ನೊಡೆಯನು ರೊಕ್ಕಗೊಡಲು ಸುಡು
ಖೂಳನಾದರೆ ಸುಡಬೇಡ ೭೮

ಎಂದು ಹೇಳುತ ಹೆಣದರುವೆಯ ಕಳೆಕೊಂಡು
ಬಂದು ಸಾರಿದ ತನ್ನ ಗುಡಲ
ಕಂದಗೆ ಈ ವಿಧಿಯಾಯಿತೆ ಶಿವ ಎಂದು
ಬಂದಳು ಸುಡುಗಾಡ ಕಳಿದು ೭೯

# ಐದನೆಯ ಸಂಧಿ

ದೇವ ಕೌಶಿಕನ ಪ್ರೇರಣೆಯಿಂದ ಹೊದ್ದಿತು
ಭಾವೆಗೆ ದೊಡ್ಡ ಕಂಟಕವು
ಜೀವಿಗಳಾರು ಕೇಳ್ವರು ಶಿವಶಿವ ಎಂದು
ಜೀವವಿಡಿದು ತಾಳಬಹುದೆ ೧

ಪಟ್ಟದರಾಯನ ಸತಿಯ ಕುಮಾರನು
ನೆಟ್ಟನೆ ಅರೆಗೊರಳಾಗಿ
ಬಟ್ಟೆಯೊಳಗೆ ಬಿದ್ದು ಅಳುತಿರೆ ಸತಿ ಕಂಡು
ಮುಟ್ಟೆ ತನ್ನಯ ಮಗನೆಂದು ೨

ಕಂದಗೆಲ್ಲಿಯ ಕಂಟಕವೆಂದು ಸತಿಯಾಗ
ನೊಂದುಕೊಳುತ ನೋಡುತಿರಲು
ಮುಂದುವರಿದು ತಳವಾರರಲ್ಲಿಗೆ ಬಂದು
ಕೊಂದು ಮುಂದಲೆಯ ಹಿಡಿದರು ೩

ರಕ್ಕಸಿ ಮಗುವ ಕೊಂದಳು ತಪ್ಪದು ಎಂದು
ಇಕ್ಕಯ್ಯ ಬಿಗಿದು ರೋಷದಲಿ
ತಕ್ಕಿಸಿ ಮಗುಗೂಡಿ ಎಳೆತಂದು ಸತಿಯನು
ಇಕ್ಕಿದರರಸಿನ ಮುಂದೆ ೪

ರಾಯ ಚಿತ್ತೈಸು ಮಗುವ ಕೊಂದ ರಕ್ಕಸಿ
ಜೀಯ ನೋಡೆಂದರಾ ಚರರು
ತಾಯೆ ನೀನಾರು ರಕ್ಕಸಿಯೊ ನರರರಸಿಯೊ
ಕಾಯ್ವೆ ತಪ್ಪದೆ ಪೇಳೆನಲು ೫

ತಂದೆ ಚಿತ್ತೈಸು ದಾರಿದ್ರ್ಯದ ಹೊಲೆಗಾಗಿ
ಕೊಂದೆನು ಈ ಬಾಲಕನ
ಮುಂದೆ ಅಂಗವು ಇದ್ದು ನಿಮಗೆ ಪಾತಕವಿಲ್ಲ
ಬಂದಂತೆ ಮಾಡಿ ಎನ್ನುವನು ೬

ನಾರಿ ಅಂಗೈಸಿ ಮಾಡಿದಳೀ ಪಾಪಿಯ
ವೀರಬಾಹುಕನಿಗೆ ನೂಕಿ
ದೂರದಿ ರುದ್ರಭೂಮಿಗೆ ಬಲಿಗೊಡಿ ಎಂದು
ಧಾರುಣಿಪತಿ ಕಳುಹಿದನು ೭

ಬಡಿದು ಹಗ್ಗದಿ ಹೆಡಗಯ್ಯ ಬಿಗಿದು ಕಟ್ಟಿ
ನಡೆತಂದು ವೀರಬಾಹುಕಗೆ
ಕಡುಪಾಪಿ ಮಗುವ ಕೊಂದಳು ತಲೆಹೊಯ್ಯೆನೆ
ನುಡಿದನು ವೀರಬಾಹುಕನು ೮

ಕರೆ ಬೇಗ ಎನ್ನ ಬಂಟನು ಚಂದುಗನನೆನೆ
ಪರಿದು ಬರಲು ಇಂತೆಂದ
ದೊರೆಯ ಮಗನ ಕೊಂದ ಪಾತಕತೊತ್ತನು
ಶಿರಪನರಿದು ಬಿಸುಡೆಂದ ೯

ಭರದಿ ಕೊಲ್ಲುತ ಎಳೆವುತ್ತ ಚಂದುಗನಾಗ
ತರಳೆಯ ರುದ್ರಭೂಮಿಯಲಿ
ಶಿರವನರಿದು ಕೊಲ್ಲುವೆನೆಂದೆನುತ ಹೋಗಿ
ದುರುಳೆ ಕುಳ್ಳಿರು ಕುಳ್ಳಿರೆಂದ ೧೦

ಕಟ್ಟಿ ಕೊಯ್ವೆನು ಮೂಡಮುಖವಾಗಿ ಕುಳ್ಳಿರು
ಇಷ್ಟದೈವವ ನೆನೆಯೆನಲು
ಬಿಟ್ಟ ಮಂಡೆಯನೋಸರಿಸಿ ಕಂಗಳ ಮುಚ್ಚಿ
ಮುಟ್ಟಿಕೊಂಡಳು ತನ್ನ ಘಣೆಯ ೧೧

ಗುರು ವಾಸಿಷ್ಠದೇವರಿಗೆ ವಂದನೆ ಮಾಡಿ
ಹರನ ನಿರ್ಮಳರೂಪ ನೆನೆದು
ಧರೆಯೊಳು ಹರಿಶ್ಚಂದ್ರ ಸತ್ಯನಾಗಲಿ ಮಗ
ಹರನ ಕಾಣಲಿ ಮುಕ್ತನಾಗಿ ೧೨

ಧರೆಯೊಳು ಮಂತ್ರಿ ನೆನೆದುದು ಕೈಸಾರಲಿ
ಧರೆಯನಾಳಲಿ ಕೌಶಿಕನು
ಧರೆಗೆ ಹಿರಿದು ವೀರಬಾಹುಕ ಸುಖಿಯಾಗಿ
ಧರೆಯು ಬೆಳೆಯಲಿ ಹೊಯ್ಯೆನಲು ೧೩

ಭಾಪು ವಿಧಿಯೆ ಕಂದನ ಮರಣವ ಕಂಡು
ಈಪರಿಯೆನ್ನ ಸತಿಯನು
ಕಾಪಾಲಿಯೆ ಬಲ್ಲ ನಾನೆತ್ತಿ ಹೊಯ್ವದ
ಈಪರಿಗಿನ್ನ ಅಂಜುವೆನೆ ೧೪

ಎತ್ತಿ ಬೊಬ್ಬಿರಿದು ಮುಂಡಿಯನಿಕ್ಕಿ ಹರಿಶ್ಚಂದ್ರ
ಕತ್ತಿಯ ತಿರುಹಿ ಲಂಘಿಸಲು
ಅತ್ತ ಕೌಶಿಕ ಆಕಾಶದೊಳಗೆ ನಿಂದು
ಇತ್ತ ಕೇಳೈ ಹರಿಶ್ಚಂದ್ರ ೧೫

ಸತ್ತ ಮಗನ ಎತ್ತಿ ಸತಿಯ ಪ್ರಾಣವ ಕಾಯ್ವೆ
ಇತ್ತುದ ಮರಳಿ ಕೊಡುವೆನು
ನಿತ್ಯನಾಗಿಯೆ ಎನ್ನ ಮಕ್ಕಳ ಮದುವೆಯಾಗು
ಉತ್ತಮನೆನಿಸಿ ತೋರುವೆನು ೧೬

ಕೇಳು ಮುನೀಶ ಎನ್ನಯ ಸತಿಸುತ ಹೋಗೆ
ಆಳುವ ರಾಜ್ಯ ತಾ ಹೋಗೆ
ಕಾಳಾಗಿ ಹೊಲೆಯನ ಸೇವೆಯ ಮಾಳ್ಪೆನು
ಹೇಳದಿರಾ ಮಾತನೆಂದ ೧೭

ನುಡಿಯದಿರಾ ಮಾತ ನೃಡನಿಗೆ ಸಮ ನೀವು
ಕಡೆಗೆ ಹಾಸ್ಯವು ನಿಮಗಹುದು
ಒಡಲಿಗಾಸೆಯ ಮಾಡಿದರೆ ಮುಕ್ತಿಗಳಿಲ್ಲ
ಬಿಡೆನಯ್ಯ ಜೀಯ ಚಿತ್ತೈಸು ೧೮

ತೋರಿಯಡಗಬಹುದೇ ಎನ್ನ ಸತ್ಯವು
ಮೀರಬಹುದೆ ವಿಧಿವಶವ
ಜಾರಿದೆನಾದರೆ ಶಿವ ತನ್ನ ಪಾದವ
ತೋರಲರಿಯ ಕರುಣದಲಿ ೧೯

ಎನಲು ಕೌಶಿಕ ಬಯಲಾಗಿ ತಾ ಹೋದನು
ಘನದೇವಸಭೆ ಮುಗಿಲೆಡೆಯ
ಮನದಿ ನೊಂದರು ಪಾಪಿ ಮುನಿಗೆ ಕರುಣವಿಲ್ಲ
ವನಿತೆ ನೊಂದಳು ಶಿವ ಎನುತ ೨೦

ಹಿಂದನೆಣಿಸಲಪಕೀರ್ತಿಯಲ್ಲದೆ ಮುಕ್ತಿ
ಯೊಂದಿಲ್ಲ ಜನ್ಮಜನ್ಮದಲಿ
ಇಂದು ಆಸೆಯ ಬಿಟ್ಟೆನೆನುತ ಖಡ್ಗವನೆತ್ತಿ
ನಿಂದು ಬೊಬ್ಬಿರಿದ ಭೂಪಾಲ ೨೧

ಸತಿಯೆಂದು ಸುತನೆಂದು ಪೃಥುವಿ ತನ್ನದೆಂದು
ಖತಿಯಿಂತು ಮನಸಿನೊಳಿಲ್ಲ
ಮತಿಗೆಡದಿರು ಮಾನಿನಿ ಶಿವಶಿವಯೆನ್ನು
ಹಿತವಿದು ನಿನಗಿದು ಪುಣ್ಯ ೨೨

ಶತಲಾಭ ನಿನಗೊಂದು ದೇಶದಲಳಿಯದೆ
ವ್ರುತವನ್ನೈದುವುದೆನ್ನ ಮುಂದೆ
ಸುತಗೂಡಿ ಶಿವನ ಪಾದವ ಕಾಣು ಶಿವಯೆನುತ
ಸತಿಯ ಶಿರಕೆ ಲಂಘಿಸಿದ ೨೩

ಕರವಾಳ ತಿರುಹುತ ಹರನಿಗರ್ಪಿತವೆಂದು
ಸುರಗಿಗೆ ಕರವೆತ್ತಿ ಮುಗಿದು
ಹಿರಿದು ಬೊಬ್ಬಿಟ್ಟು ಪರಂಜ್ಯೋತಿ ಶಿವಯೆಂದು
ಶಿರವ ತರಿದ ರಾಣಿಯನು ೨೪

ಹೊಡೆದ ಗಾಯಕೆ ತಲ್ಲಣಿಸಿ ದೇವರದೇವ
ಪಿಡಿದೆತ್ತಿ ಖಡ್ಗದ ಕೈಯ
ಒಡನೆ ಪಾರ್ವತಿ ನಂದಿ ವೀರೇಶ ಸಹವಾಗಿ
ಮೃಡ ಬಂದ ಕಾಶಿಯ ಲಿಂಗ ೨೫

ನೊಸಲ ಕಂಗಳು ದಶಭುಜ ಪಂಚಮುಖವುಳ್ಳ
ಎಸೆವ ಕೆಂಜೆಡೆ ಕೋಟಿ ರವಿಯು
ಮುಸುಕಿಹ ಶಶಿ ಅರಿದಲೆ ಪುಲಿದೊಗಲಿನ
ಎಸೆವ ಶಿವನು ಬಂದನಾಗ ೨೬

ಸತ್ಯದ ಗುರು ಶ್ರುತಿಗೆ ಪಂಚಾಕ್ಷರಿ
ಮುಕ್ತಿಗೆ ಮುಕ್ತಿಯೆಂದೆನಿಪ
ಕರ್ತೃ ಕಾಮಾರಿ ಕಾಶಿಯ ಪುಣ್ಯದೇವನು
ಭಕ್ತನೆಡೆಗೆ ಬಂದನಾಗ ೨೭

ನಿರ್ಮಳ ಶಿವನ ಎಡದಿ ಮಹಾವಿಷ್ಣುವು
ಬ್ರಹ್ಮನು ಬಲದಲೊಪ್ಪಿದನು
ಇರ್ಮ್ಮೈಯೊಳು ಇಂದ್ರ ಮುನಿ ದೇವರ್ಕಳು
ಒಮ್ಮೊಮ್ಮೆಗೆ ಜಯವೆನುತ ೨೮

ಮೇಘದೊಳಗೆ ದೇವರ್ಕಳ ಸತಿಯರು
ಬೇಗ ಸಜ್ಜುಕದ ಪುಷ್ಪಗಳ
ನಾಗಭೂಷಣ ಜಯ ಜಯ ಎಂದು ಸುರಿದರು
ಆಗ ಪೊಗಳೆ ಹರಿಶ್ಚಂದ್ರ ೨೯

ಶರಣಾಗು ಗಿರಿಜೆಯ ವರಪುಣ್ಯ ನಿತ್ಯನೆ
ಶರಣಾಗು ಸುರಮುನಿ ವಂದ್ಯ
ಶರಣಾಗು ಸಕಲ ದೇವರದೇವ ಕರುಣಾಳು
ಶರಣಾಗು ನಾಗಭೂಷಣನೆ ೩೦

ಶ್ರುತಿಗೆ ನಿಲುಕದ ವೇದಕೆ ವೈದೋರದ
ಶತಕೋಟಿ ದೇವರ್ಕಳನು
ಹಿತದಿ ರಕ್ಷಿಸಿ ಕೃಪೆಯಿಂಡ ಪೊರೆವ ದೇವ
ಅತಿಪುಣ್ಯ ನಾನಾದೆನೆಂದ ೩೧

ದೇವರೊಳಧಿಕ ಮುಕ್ತಿಯನೀವ ದೇವ ನೀ
ನಾವ ಕಾಲಕೆ ವೈದೋರಿ
ಜೀವಿಗಳಿಗೆ ಮುಖದೋರುವ ಪುಣ್ಯವು
ಆವ ಜನ್ಮದ ಸುಕೃತವೆನಗೆ ೩೨

ನಾಗಕಂಕಣ ನಿರ್ಮಳ ಪರಂಜ್ಯೋತಿ ಮ
ತ್ತಾಗ ವೈದಡಹಿ ಇಂತೆಂದ
ಆಗಮ ಶಾಸ್ತ್ರ ಪುರಾಣಾದಿ ಮುನಿಗಳು
ಯೋಗದಿ ತಪವ ತಪ್ಪುವರು ೩೩

ಒಂದಿನಿಸಿಲ್ಲ ನಿನ್ನಯ ಸತ್ಯಕವಗುಣ
ಇಂದು ಮೆಚ್ಚಿದೆನು ನಿನ್ನಾಣೆ
ಕಂದ ನಿನ್ನಯ ಸತಿಸುತರ ಮನಸಿಗೆ
ಎಂದು ಕಾಣೆನು ಪ್ರತಿಯಾಗಿ ೩೪

ಕಂದ ಮೆಚ್ಚಿದೆ ಹರಿಶ್ಚಂದ್ರ ಮೂಲೋಕವ
ಸಂದೇಹ ಬೇಡ ಆಳೆಂದ
ಇಂದುಶೇಖರಗೆ ಕೈಮುಗಿದು ಭೂಪಾಲನು
ನಿಂದು ಬಿನ್ನೈಸಿದನಾಗ ೩೫

ಇಂದುಧರಗೆ ಕೈಮುಗಿದೆಮಧರ್ಮನು
ಅಂದು ಸತಿಯು ಕೊಂಡಗ್ನಿ
ಬಂದಿತು ಋಣ ಶಿವಯೆಂದೆರಗಲು ನಾ
ರಂದ ನುಡಿದನಿಂತೆಂದು ೩೬

ದೇವಸಭೆಯಲಂದು ನುಡಿದ ಪ್ರತಿಜ್ಞೆಯ
ದೇವ ವಸಿಷ್ಠಮುನಿಗೆ
ದೇವ ಕೌಶಿಕ ಅರ್ಧ ಫಲವ ಕೊಡೆನಲಾಗಿ
ದೇವಮುನೀಂದ್ರನಿಂತೆಂದ ೩೭

ಪಡೆಯಬಹುದು ಜಪತಪ ಶಿವಪೂಜೆಯ
ನುಡಿಯಬಹುದು ಶಾಸ್ತ್ರಗಳ
ಕಡುನೊಂದು ಸತ್ಯಗೆಡದ ಹರಿಶ್ಚಂದ್ರಗೆ
ಕೊಡುವುದೇನರಿದೆನ್ನ ಫಲವ ೩೮

ಕೊಟ್ಟನು ವಾಸಿಷ್ಠಗೆಂದು ಧಾರೆಯನಿತ್ತು
ಮುಟ್ಟಿಸಿ ಶಿವನಂಘ್ರಿಯನು
ಪಟ್ಟವಕಟ್ಟಿ ಸಲಹಿ ಪಾವನಮೂರ್ತಿ
ಖಟ್ವಾಂಗಧರ ನೇಮಿಸಿದ ೩೯

ನೆರೆದಿಹ ಸುರರು ಕಿನ್ನರರು ಕಿಂಪುರುಷರು
ಸುರನಾರಿಯರು ಮೇಘದಲಿ
ಹರನ ನೇಮದಲಿ ಆರತಿಯೆತ್ತಿ ಪಾಡಿತು
ಹರುಷದಿ ವಾದ್ಯ ಪೂಮಳೆಯು ೪೦

ನೆರೆದಿಹ ಸಪ್ತದ್ವೀಪದ ಧರಣೀಶನೀತನ
ಪುರಕೊಯ್ಯಲೇತಕೆ ಎನುತ
ಹರಿಹರ ಮೊದಲಾಗಿ ಸುರಮುನಿಗಳು ಕಾಶೀ
ಪುರದೊಳು ಪಟ್ಟಗಟ್ಟಿದರು ೪೧

ಪಟ್ಟವ ಕಟ್ಟಿ ಶಿವನು ಚಂದ್ರಮತಿಯನು
ಮುಟ್ಟಿ ಕರುಣದಿ ಮೈದಡಹಿ
ಸೃಷ್ಟಿಯನಾಳು ಭೂಪಾಲ ಲೋಹಿತ ಎಂದು
ಖಟ್ವಾಂಗಧರ ತೆರಳಿದನು ೪೨

ಹರ ಕರುಣಿಸೆ ಹರಿಶ್ಚಂದ್ರ ಪುರವ ಹೊಕ್ಕು
ಧರೆಯ ಪಾಲಿಸಿ ಸುಖದಿಂದ
ವರಕೌಶಿಕನು ವಸಿಷ್ಠವನವ ಹೊಕ್ಕು
ಹರಕರುಣದಲೊಪ್ಪಿದರು ೪೩

ಧರೆಯೊಳಗಾವನು ಹರಿಶ್ಚಂದ್ರನ ಕಥೆಯನು
ಪರಮ ಭಕ್ತಿಯಲಿ ಕೇಳಿದರೆ
ಹಿರಿದು ಸಂತೋಷವಪ್ಪುದು ಹರಕರುಣವು
ನೆರೆವುದು ಸಕಲ ಶಾಂತಿಯಲಿ ೪೪

ಸತ್ಯದ ನೆಲೆ ಮುಕ್ತಿಯ ಬೀಡು ಪುಣ್ಯದ
ಕೀರ್ತಿಯ ತಲೆವನೆಯೆನಿಸಿ
ಸತ್ಯದ ಕಥೆಯ ಕೇಳಿದ ಪುಣ್ಯಜನರಿಗೆ
ನಿತ್ಯವಾಗಲಿ ಸುಖವೆಂದ ೪೫

---

# ಅರ್ಥಕೋಶ

(ಸೂಚನೆ: ಮೊದಲನೆಯ ಸಂಖ್ಯೆ ಪುಟವನ್ನೂ ಎರಡನೆಯ ಸಂಖ್ಯೆ ಪದ್ಯವನ್ನೂ ಸೂಚಿಸುತ್ತದೆ.)

### ಅ

| | | |
|---|---|---|
| ಅಟ್ಟ | ೭೧-೧ | ಬೇಯಿಸಿದ |
| ಅಟ್ಟುಳಿ | ೧೧-೫೩ | ತೊಂದರೆ, ಹಿಂಸೆ |
| ಅಡಗು | ೭೧-೧ | ಮಾಂಸ |
| ಅತಿಗಳೆ | ೪-೧೮ | ದಾಟು, ಅಲ್ಲಗಳೆ |
| ಅರತ | ೨೭-೫೯ | ಬತ್ತಿದ, ಒಣಗಿಹೋದ |
| ಅಲೆ | ೧೧-೫೨ | ತೊಂದರೆ, ಪೀಡೆ |
| ಅಶನ | ೩೭-೮೬ | ಅನ್ನ |
| ಅಳವಟ್ಟಿರುವ | ೪೬-೧೭ | ಹೊಂದಿಕೊಂಡಿರುವ |
| ಅಳವಹುದೆ | ೩೬-೮೩ | ಸಾಧ್ಯವಾಗುವುದೆ |
| ಅಳುಪು | ೪೦-೧೦೩ | ಆಸೆಪಡು |
| ಅಂಗೈಸಿ | ೮೮-೭ | ಇಷ್ಟಪಟ್ಟು |

### ಆ

| | | |
|---|---|---|
| ಆಪಂತೆ | ೨೫-೨೭ | ಶಕ್ತಿಯಿರುವಂತೆ |

### ಇ

| | | |
|---|---|---|
| ಇಟ್ಟಣಿಸು | ೭೧-೧ | ಗುಂಪಾಗು, ಒತ್ತಾಗು |
| ಇಂದುಶೇಖರ | ೯೪-೩೫ | ಈಶ್ವರ |

### ಉ

| | | |
|---|---|---|
| ಉಚ್ಚಳಿಸು | ೨೨-೧೦ | ಸೀಳು, ಹೊರಹೊಮ್ಮು |
| ಉಗಿ | ೨೫-೨೬ | ಸುರಿ, ಕೀಳು |
| ಉರ | ೨೨-೧೦ | ಎದೆ |
| ಉರಗ | ೮೫-೭೦ | ಹಾವು |
| ಉರವಣಿಸಿ | ೧೯-೯೩ | ವೇಗವಾಗಿ, ತೀವ್ರವಾಗಿ |
| ಉರುಬು | ೧೨-೫೬ | ತೊಂದರೆ, ಭಯ |

ಎ

| | | |
|---|---|---|
| ಎಕ್ಕಲ | ೨೦-೪ | ಕಾಡುಹಂದಿ |
| ಎಕ್ಕೆ | ೭೧-೯ | ಸಮೂಹ |
| ಎಡೆಯಾಟ | ೧೬-೭೭ | ತಿರುಗಾಟ, ಓಡಾಟ |
| ಎರಳೆ | ೧೫-೭೪ | ಜಿಂಕೆ |
| ಎಳತಟ | ೧೧-೫೩ | ಎಳೆದಾಟ, ಆಕರ್ಷಣೆ |
| ಎಸಕ | ೬-೨೯ | ಕೆಲಸ |

ಒ

| | | |
|---|---|---|
| ಒಟ್ಟೈಲು | ೭೧-೧ | ರಾಶಿ, ಗುಂಪು |

ಓ

| | | |
|---|---|---|
| ಓಜೆ | ೭೯-೪೧ | ಕ್ರಮ, ರೀತಿ |
| ಓತು | ೪೬-೧೬ | ಪ್ರೀತಿಸಿ |
| ಓರಂತೆ | ೨೬-೩೦ | ಒಂದೇ ಸಮನಾಗಿ |
| ಓಸರಿಸು | ೪೬-೧೯ | ಪಕ್ಕಕ್ಕೆ ಸರಿ, ಜಾರು |

ಕ

| | | |
|---|---|---|
| ಕಡಿತಲೆ | ೧೩-೬೩ | ಕತ್ತಿ |
| ಕಣಿ | ೧೪-೬೬ | ಗಂಟು, ಕಟ್ಟು (?) |
| ಕಣ್ಮುನಿ | ೯-೯ | ಕಣ್ವಮುನಿ |
| ಕತ್ತಿತು | ೭೯-೪೦ | ಉರಿಯಿತು, ಹೊತ್ತಿತು |
| ಕಪ್ಪುಗೊರಳ | ೧೭-೮೨ | ಈಶ್ವರ |
| ಕಬ್ಬಾಯಗುಬ್ಬಿ | ೧೫-೭೨ | ಕಪ್ಪುಮೂತಿಯುಳ್ಳ ಗುಬ್ಬಿ |
| ಕರಕಂಠ | ೨೩-೧೬ | ಈಶ್ವರ |
| ಕರವಾಳ್ | ೯೧-೨೪ | ಕತ್ತಿ |
| ಕಸುಕ | ೬೮-೧೨೭ | ಸೇವಕ |
| ಕಾಕು | ೩೧-೫೮ | ಕೇಡು, ನಾಶ |
| ಕಾಪಾಲಿ | ೭೦-೧೩೭ | ಈಶ್ವರ |
| ಕಾಲವರು | ೧೩-೬೨ | ಕಾಲಾಳು |

| | | |
|---|---|---|
| ಕಾಳಾಗಿ | ೬-೨೫ | ಕೆಟ್ಟುಹೋಗಿ, ಹಾಳಾಗಿ |
| ಕೂಪರ್ | ೮-೨೬ | ಪ್ರೀತಿಸುವವರು |
| ಕೊಟ್ಟೆ | ೪೧-೧೦೪ | ಗಲಾಟೆ, ಜಗಳ (?) |
| ಕೌರು | ೨೫-೨೭ | ದುರ್ವಾಸನೆ, ಕಮರುವಾಸನೆ |
| ಕಂತು | ೪೭-೨೪ | ಮುಳುಗು |
| ಕಂದಲ | ೬೭-೧೨೨ | ಮಣ್ಣಿನ ಪಾತ್ರೆ |
| ಕಂದರ್ಪ | ೨೫-೨೯ | ಮನ್ಮಥ |

## ಖ

| | | |
|---|---|---|
| ಖಟ್ವಾಂಗಧರ | ೯೪-೩೯ | ಈಶ್ವರ |
| ಖಂಡಪರಶು | ೨೨-೧೩ | ಈಶ್ವರ |
| ಖಂಡೆಯ | ೧೩-೬೩ | ಕತ್ತಿ |

## ಗ

| | | |
|---|---|---|
| ಗಮ್ಮನೆ | ೧೦-೪೬ | ಬೇಗನೆ |
| ಗಳಹು | ೩೬-೮೨ | ಹರಟು |
| ಗೂಳಯು | ೭೧-೨ | ರಾಶಿ, ಗುಂಪು |
| ಗೋಳ | ೨೪-೨೨ | ಗೋಣು, ಕುತ್ತಿಗೆ |

## ಘ

| | | |
|---|---|---|
| ಘಸಣಿ | ೬-೨೯ | ಆಯಾಸ |
| ಘೀಳಿಡು | ೧೪-೬೭ | ಗಟ್ಟಿಯಾಗಿ ಕೂಗು |

## ಚ

| | | |
|---|---|---|
| ಚಪ್ಪನ್ನ | ೬೬-೧೧೮ | ಐವತ್ತಾರು |
| ಚಪ್ಪಳ | ೫೫-೬೪ | ಸೊಂಟ (?) |
| ಚಬುಕು | ೫೪-೫೬ | ಚಾವಟಿ |
| ಚಿಟ್ಟಿಗರು | ೧೭-೮೧ | ವಟುಗಳು |
| ಚಿಮ್ಮುರಿ | ೧೩-೬೪ | ಒಂದು ರೀತಿಯ ರುಮಾಲು |
| ಚಿಲುಕು ಗಣ್ಣಿಲು | ೧೪-೬೬ | ಚಿಲುಕದಂತಿರುವ ಕಣ್ಣಿ |

| | | |
|---|---|---|
| ಚಾಳುಪ | ೧೪-೬೬ | ಒಂದು ರೀತಿಯ ಬಲಿ |
| ಚುಚ್ಚುಳ | ೩೦-೪೯ | ಚುಚ್ಚುವಮಾತು |
| ಚೂಣಿ | ೫೫-೬೧ | ಸೈನ್ಯದ ಮುಂಭಾಗ |
| ಚೋದ್ಯ | ೧೯-೯೦ | ಆಶ್ಚರ್ಯ |

**ಜ**

| | | |
|---|---|---|
| ಜಾಗರಿಗ | ೧೫-೭೨ | ಒಂದು ವಿಧವಾದ ಹಕ್ಕಿ |

**ಝ**

| | | |
|---|---|---|
| ಝುಲ್ಲಿ | ೯-೪೨ | ಕುಚ್ಚು |

**ತ**

| | | |
|---|---|---|
| ತಕ್ಕಿಸಿ | ೮೭-೪ | ತಕ್ಕೈಸಿ, ಆಲಿಂಗಿಸಿ |
| ತವು | ೮-೩೭ | ಕತ್ತರಿ |
| ತರಹರಿಸು | ೨೨-೧೦ | ನಡುಗು |
| ತವಗ | ೭೪-೧೮ | ಜಗುಲಿ |
| ತಳಿ | ೨೦-೨ | ಬೇಲಿ |
| ತಳಿಲು | ೭೧-೨ | ಒಣಗಿದ ಕಾಯಿ |
| ತಾಳಿಸಿ | ೭೧-೨ | ಹುರಿದು |
| ತುರುಗಿದ | ೧-೩ | ಒತ್ತಾಗಿ ಸೇರಿದ, ಸಿಬಿಡವಾದ |
| ತೂಳಿ | ೨೪-೨೩ | ಹಿಂಜರಿದು |
| ತೊಂಡೆಗರುಳು | ೫೪-೫೬ | ಕುಚ್ಚಿನಂತಿರುವ ಕರುಳು |
| ತೊರಳೆ | ೭೧-೧ | ಗುಲ್ಮ, ದೇಹದ ಒಂದು ಭಾಗ |

**ದ**

| | | |
|---|---|---|
| ದರಿ | ೫೧-೪೦ | ಗುಹೆ, ಗವಿ |
| ದೀಹ | ೨೦-೨ | ಬೇಟೆಯನ್ನು ಕಲಿಸಿದ ಪ್ರಾಣಿ |
| ದಂಡಿಗೆ | ೨೬-೩೦ | ವೀಣೆ |
| ದಂತಿ | ೫೦-೩೯ | ಆನೆ |

**ಧ**

| | | |
|---|---|---|
| ಧಾರೆ | ೩೦-೫೧ | ತುದಿ, ಅಂಚು |

## ನ

| | | |
|---|---|---|
| ನನ್ನಿ | ೪೩-೧ | ಸತ್ಯ |
| ನನೆ | ೫-೨೨ | ಮೊಗ್ಗು |
| ನಾರಂದ | ೬-೨೬ | ನಾರದ |
| ನಿಬ್ಬರ | ೨೪-೨೦ | ವೇಗ, ರಭಸ |
| ನಿರೂಪ | ೩೫-೭೪ | ಆಜ್ಞೆ, ಅಪ್ಪಣೆ |
| ನಿಸ್ಸಾಳ | ೧೪-೬೭ | ತಮಟೆ |
| ನೀತ | ೬೫-೧೧೨ | ನಿಶ್ಚಿತ |
| ನೀಸು | ೪೦-೧೦೦ | ಅನುಭವಿಸು |
| ನೆರಪಿ | ೧೧-೫೧ | ಒಟ್ಟುಗೂಡಿಸಿ |
| ನೆಲಹಾಗ | ೭೩-೧೪ | ನೆಲಕ್ಕೆ ಕೊಡಬೇಕಾದ ಹಣ |
| ನೋಂತು | ೪೮-೨೬ | ವ್ರತಮಾಡಿ |

## ಪ

| | | |
|---|---|---|
| ಪನ್ನೆಯ | ೧೩-೬೪ | ಮಿಾಸೆಯನ್ನುಳ್ಳ |
| ಪರುಷ | ೩೧-೫೭ | ಸ್ಪರ್ಶಶಿಲೆ |
| ಪಾಯಿದಳ | ೪೧-೧೦೫ | ಕಾಲಾಳ ಸೈನ್ಯ |
| ಪೃಥುವಿ | ೩೮-೯೨ | ಭೂಮಿ |
| ಪುಂಜ | ೧೬-೭೮ | ಸಮೂಹ, ಗುಂಪು |

## ಫ

| | | |
|---|---|---|
| ಫಾಲನಯನ | ೪೭-೨೦ | ಹಣೆಯಲ್ಲಿ ಕಣ್ಣುಳ್ಳವನು, ಈಶ್ವರ |

## ಬ

| | | |
|---|---|---|
| ಬಲ್ಲೆ | ೧೪-೬೫ | ಈಟಿ |
| ಬಸವಳಿ | ೭೭-೩೨ | ಶಕ್ತಿಗುಂದು |
| ಬಾರು | ೭೧-೨ | ಚರ್ಮದ ಪಟ್ಟಿ |
| ಬಿನುಗು | ೩೩-೬೪ | ಹೀನ, ನೀಚ |
| ಬಿರುಬು | ೧೨-೫೬ | ಬಿರುಸು |
| ಬೀಳುನುಡಿ | ೪-೧೭ | ವ್ಯರ್ಥವಾದ ಮಾತು |

| | | |
|---|---|---|
| ಬೆಬ್ಬಳಿ | ೨೪-೨೦ | ಗಾಬರಿ |
| ಬೆಸನ | ೨೫-೨೭ | ಆಜ್ಞೆ |
| ಬೇಟ | ೮-೩೮ | ಪ್ರೀತಿ |
| ಬೋನಗುಡಿಕೆ | ೧೪-೬೮ | ಆಹಾರ ಇಟ್ಟುಕೊಳ್ಳುವ ಪಾತ್ರೆ |
| ಬಂಟುಳ್ಳ | ೧೩-೬೧ | ಶಕ್ತಿಯುಳ್ಳ |

## ಭ

| | | |
|---|---|---|
| ಭಾವೆ | ೮೭-೧ | ಹೆಂಗಸು |
| ಭಾಳನಯನ | ೨೪-೨೨ | ಹಣೆಯಲ್ಲಿ ಕಣ್ಣುಳ್ಳವನು, ಈಶ್ವರ |
| ಭುವನೇಶ | ೬೭-೧೨೧ | ದೊರೆ, ರಾಜ |

## ಮ

| | | |
|---|---|---|
| ಮೆಟ್ಟು | ೧೧-೫೦ | ಹತ್ತು |
| ಮೇದಿನೀಪತಿ | ೧೯-೯೦ | ದೊರೆ, ರಾಜ |
| ಮೇಲವರು | ೧೩-೬೨ | ಮೇಲಾಳು |
| ಮುಂಗಿಲು | ೧೬-೭೬ | ಮುಂಗಸಿ |
| ಮಗ್ಗು | ೮೫-೭೪ | ಸಾಯಿ, ನಷ್ಟವಾಗು |
| ಮದನಾರಿ | ೮-೩೯ | ಈಶ್ವರ |
| ಮನ್ನೆಯ | ೯-೪೨ | ನಾಯಕ, ಮಾಸ್ತ |
| ಮಸಗು | ೪೫-೧೩ | ವಿಜೃಂಭಿಸು |
| ಮಸುಳಿಸು | ೭೯-೪೪ | ಕಾಂತಿಗೆಡು |
| ಮಾರ | ೨೬-೩೦ | ಮನ್ಮಥ |
| ಮಾರಾರಿ | ೩೦-೫೧ | ಈಶ್ವರ |
| ಮಿಸುನಿ | ೯-೪೧ | ಚಿನ್ನ |
| ಮುಪ್ಪುರಿ | ೧೮-೮೬ | ಮೂರು ಹುರಿ |
| ಮೃಡ | ೬-೨೭ | ಈಶ್ವರ |

## ರ

| | | |
|---|---|---|
| ರುಜೆ | ೨೬-೩೩ | ರೋಗ |
| ರೂಢೀಶ | ೭-೩೦ | ರಾಜ |

## ಲ

| | | |
|---|---|---|
| ಲಹರಿ | ೬೭-೧೨ | ತೀವಿ, ಪ್ರವಾಹ |
| ಲೋಗರು | ೮೨-೫೭ | ಸಾಮಾನ್ಯ ಜನ |
| ಲೋಲಲೋಚನೆ | ೭೮-೩೪ | ಚಂಚಲವಾದ ಕಣ್ಣುಳ್ಳವಳು, ಹೆಂಗಸು |

## ವ

| | | |
|---|---|---|
| ವಟವೃಕ್ಷ | ೭೯-೪೪ | ಆಲದ ಮರ |
| ವಾಸಿ | ೬-೨೭ | ಹಟ, ಗುಣ |
| ವಿಗಡ | ೨೫-೨೮ | ದುಷ್ಟ, ಕೆಡುಕ |
| ವಿಪಿನ | ೧೮-೮೫ | ಕಾಡು, ಅರಣ್ಯ |

## ಶ

| | | |
|---|---|---|
| ಶಬರ | ೨೧-೫ | ಬೇಡ |
| ಶರಭ | ೫೦-೩೯ | ಸಿಂಹಕ್ಕಿಂತ ಬಲಿಷ್ಠವಾದ ಪ್ರಾಣಿ |
| ಶ್ಯಾಮಕಂಧರ | ೧-೧ | ಕಪ್ಪು ಕುತ್ತಿಗೆಯುಳ್ಳವನು, ಈಶ್ವರ |
| ಶ್ರವ | ೮೧-೫೪ | ಶವ, ಹೆಣ |

## ಸ

| | | |
|---|---|---|
| ಸಗ್ಗಳೆ | ೩೮-೯೧ | ಚರ್ಮದ ಚೀಲ |
| ಸಜ್ಜುಕ | ೯೨-೨೯ | ಒಂದು ವಿಧವಾದ ಹೂವು |
| ಸತ್ತಿಗೆ | ೨೫-೨೮ | ಛತ್ರಿ |
| ಸಸಿ | ೨೫-೨೯ | ಚಂದ್ರ |
| ಸಸಿನ | ೩೪-೭೧ | ಸರಿ, ನೆಟ್ಟಗೆ |
| ಸಾಳುವ | ೧೩-೬೧ | ಒಂದು ಜಾತಿಯ ಹಕ್ಕಿ |
| ಸಿಡಿ | ೧೪-೬೬ | ಒಂದು ವಿಧವಾದ ಬಲೆ |
| ಸಿದ್ದಿಗೆ | ೭೪-೧೮ | ಚಟ್ಟ |
| ಸೀಗುಡಿ | ೭೧-೨ | ಒಂದು ಜಾತಿಯ ಮೀನು |
| ಸುರಗಿ | ೯೧-೨೪ | ಕತ್ತಿ |
| ಸೆಜ್ಜಾಗೃಹ | ೪೩-೨ | ಮಲಗುವ ಮನೆ |
| ಸೆಳೆಗೋಲು | ೧೪-೬೬ | ಬೆತ್ತದ ಕೋಲು |